www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 9 ಸೆಪ್ಟಂಬರ್ 2013
Volume : IX Issue : IX September 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಭಕ್ತರ ಹೇಳಿಕೆಗಳು
3. ವಯಸ್ಕರ ಸ್ವರ
4. ಪ್ರಾರ್ಥನಾ ಮನವಿಗಳು
5. ಪ್ರೀತಿ ಮತ್ತು ಕ್ಷಮೆ !
6. ಪ್ರಾರ್ಥನಾ ಸ್ವರ
7. ನೀತಿವಂತನ ಆಶೀರ್ವಾದಗಳು
8. ಯೌವನಸ್ಥರ ಸ್ವರ – ಪವಿತ್ರಾತ್ಮನೊಂದಿಗೆ ನಡೆ
9. ಸ್ಥಳೀಯ ಮತ್ತು ವಿದೇಶ ಸುದ್ಧಿ
10 ಹರ್ಷ ಧ್ವನಿಯು ಕೇಳಿಸುವದು
11. ಮಹಿಳೆಯರ ಸ್ವರ
12. ಆರೋಗ್ಯ ಸ್ವರ
13. ಜಾಹೀರಾತು
14. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ವಂದನೆಗಳು. ಲೋಕದ ಎಲ್ಲಾ ಕಡೆ ನಡೆಯುವ ನಾಶನಗಳನ್ನು ನೋಡುವಾಗ ಕರ್ತನ ಬರೋಣವು ತುಂಬಾ ಹತ್ತಿರದಲ್ಲೇ ಇದೆ ಎಂದು ತಿಳಿದುಕೊಳ್ಳಬಹುದು. ಆದರೆ ರಕ್ಷಣೆಹೊಂದ ಬೇಕಾದ ಎಷ್ಟೋ ಜನರು ಇನ್ನೂ ರಕ್ಷಣೆ ಹೊಂದಿಲ್ಲ. ಇದಕ್ಕೆ ಕಾರಣವೇನು?

1) ದೇವರ ಮಕ್ಕಳ ಸೋಮಾರಿತನ
2) ದೇವರ ಮಕ್ಕಳ ಕೆಟ್ಟಂತಹ ಸಾಕ್ಷಿ
3) ದೇವರ ಮಕ್ಕಳ ಆತ್ಮಭಾರವಿಲ್ಲದ ಜೀವನ.

1) **ದೇವರ ಮಕ್ಕಳ ಸೋಮಾರಿತನ :–** ಜ್ಞಾನೋ. 6:6–11ರಲ್ಲಿ ಇರುವೆಯ ಬಗ್ಗೆ ಒಳ್ಳೆ ಉದಾಹರಣೆ ಕೊಡಲ್ಪಟ್ಟಿದೆ. ಇಂದು ನಾವು ನಾಶವಾಗುವಂತಹ ಆತ್ಮಗಳಿಗಾಗಿ ಎಷ್ಟು ಪ್ರಾರ್ಥನೆ ಮಾಡುತ್ತಿದ್ದೇವೆ? ಇಂದು ನಾವು ನಾಶವಾಗುತ್ತಿರುವಂತಹ ಆತ್ಮಗಳಿಗೆ ಎಷ್ಟು ಸುವಾರ್ತೆ ಹೇಳುತ್ತಿದ್ದೇವೆ? **"ಯೆಹೋವನು ನೇಮಿಸಿದ ಕೆಲಸದಲ್ಲಿ ಆಲಸ್ಯಗಾರನು ಶಾಪಗ್ರಸ್ತನಾಗಲಿ; ತನ್ನ ಕತ್ತಿಯನ್ನು ರಕ್ತಸುರಿಸದಂತೆ ತಡೆಯುವವನಿಗೆ ಶಾಪತಗಲಲಿ"** (ಯೆರೆ. 48:10).

2) **ದೇವರ ಮಕ್ಕಳ ಕೆಟ್ಟುಹೋದ ಸಾಕ್ಷಿ :–** ಇನ್ನೊಬ್ಬರಿಗೆ ಮಾದರಿ ತೋರಿಸುವಂತಹ ನಾವೇ ಪಾಪದಲ್ಲಿ ಜೀವಿಸಿದರೆ ಏನು ಪ್ರಯೋಜನ. ಮತ್ತಾ. 15:14 ತಾನೇ ಕುರುಡರು ಮತ್ತೊಬ್ಬರಿಗೆ ದಾರಿ ತೋರಿಸುವುದಕ್ಕೆ ಹೋಗುತ್ತಾರೆ. ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ ಕುಣಿಯಲ್ಲಿ ಬೀಳುವರು ಅಂದನು. ರೋಮ. 2:21–24 ಮತ್ತೊಬ್ಬನಿಗೆ ಉಪದೇಶ ಮಾಡುವ ನೀನು ನಿನಗೆ ಉಪದೇಶ ಮಾಡಿಕೊಳ್ಳದೇ ಇದ್ದಿಯೋ? ಕದಿಯಬಾರದೆಂದು ಬೋಧಿಸುವ ನೀನು ಕದಿಯುತ್ತಿಯೋ?

3) **ದೇವರ ಮಕ್ಕಳ ಅನ್ಯೋನ್ಯತೆ ಇಲ್ಲದ ಜೀವನ :–** ಮತ್ತಾ. 18:19–20 ಇಬ್ಬರು ಮೂವರು ಒಂದೇ ಮನಸ್ಸಿನೊಂದಿಗೆ ಪ್ರಾರ್ಥಿಸುವಾಗ ಕರ್ತನು ಅನುಗ್ರಹಿಸುತ್ತಾನೆ. ಆದರೆ ಇಂದು ವಿಶ್ವಾಸಿಗಳಲ್ಲಿ, ಸಭೆಯುವರಲ್ಲಿ ಪರಸ್ಪರ ಅನ್ಯೋನ್ಯತೆ ಇಲ್ಲದಿರುವುದನ್ನು ನಾವು ಕಾಣಲು ಸಾಧ್ಯ.

4) **ದೇವರ ಮಕ್ಕಳ ಆತ್ಮಭಾರ ಇಲ್ಲದ ಜೀವನ :–** ಅನೇಕರಿಗೆ, ಸುವಾರ್ತೆ ಸಾರಲು, ಆತ್ಮಗಳಿಗಾಗಿ ಪ್ರಾರ್ಥಿಸಲು, ಆತ್ಮಗಳಿಗೆ ಸಮಯಕೊಡಲು ಸಾಧ್ಯವಾಗದಿರುವ ಕಾರಣವೇನು? ಆತ್ಮಭಾರ ಇಲ್ಲ. ನಾನು ಮತ್ತು ನನ್ನ ಮನೆಯವರು ರಕ್ಷಣೆ ಹೊಂದಿದ್ದೇವೆ ಇನ್ನು ಯಾರಾದರೂ ರಕ್ಷಣೆ ಹೊಂದಿದ್ದರೆ ನಮಗೇನು ಎಂಬ ರೀತಿಯಲ್ಲಿ ನಾವು ಜೀವಿಸುತ್ತಾ ಇದ್ದೇವೆ. ಈ ಬರಹದ ಮೂಲಕ ಇದನ್ನು ಓದುತ್ತಿರುವ ಪ್ರತಿಯೊಬ್ಬರಿಗೂ ಆತ್ಮಭಾರಕೊಡಲು ಕರ್ತನಲ್ಲಿ ಕಣ್ಣೀರಿನಿಂದ ಪ್ರಾರ್ಥೀಸುತ್ತೇನೆ ಆಮೆನ್.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

7) **ರೋಗವಿರುವುದಿಲ್ಲ :–** ಪಾಪದಿಂದ ಶಾಪ, ಶಾಪದಿಂದ ರೋಗವೂ, ರೋಗದಿಂದ ವೇದನೆ, ದು:ಖ, ಗೋಳಾಟವೂ ಮನುಷ್ಯ ಜಾತಿಯನ್ನು ನಿರಂತರವಾಗಿ ಕಾಡುತ್ತವೆ. ಈ ಕಾರಣಗಳಿಂದಾಗಿ ಮನುಷ್ಯನಿಗೆ ಸಮಾಧಾನವಿಲ್ಲ. ಆದರೆ ಸಾವಿರ ವರ್ಷಗಳ ಆಡಳಿತದಲ್ಲಿ ಎಲ್ಲಾ ಮನುಷ್ಯರು ಆನಂದ ಭರಿತರಾಗಿರುವರು. ಯೆಶಾ. 35:5–6 ಆಗ ಕುರುಡರ ಕಣ್ಣು ಕಾಣುವುದು, ಕಿವುಡರ ಕಿವಿ ಕೇಳುವುದು, ಕುಂಟನು ಜಿಂಕೆಯಂತೆ ಹಾರುವನು, ಮೂಕ ನಾಲಿಗೆಯು ಹರ್ಷಧ್ವನಿಗೈಯುವದು. **"ಚೀಯೋನಿನ ಯಾವ ನಿವಾಸಿಯೂ ತಾನು ಅಸ್ವಸ್ಥನು ಎಂದು ಹೇಳನು"** (ಯೆಶಾ. 33:24). ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತ ಸಂತೋಷವೆಂಬ ಕೀರಿಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು. ಹರ್ಷಾನಂದಗಳನ್ನು ಅನುಭವಿಸುವರು. ಮೊರೆಯೂ, ಕರೆಕರೆಯೂ ತೊಲಗಿಹೋಗುವವು (ಯೆಶಾ. 35:10).

8) ಆ ದಿನಗಳಲ್ಲಿ ಅಧರ್ಮವು ಕೊನೆಗೊಳ್ಳುವುದು, ಅಕ್ರಮ ಇಲ್ಲ, ಪಾಪ, ಮೋಸ, ಇಲ್ಲದ ಒಂದು ಆಡಳಿತವಾಗಿರುತ್ತದೆ (ದಾನಿ. 9:24).

9) ಪಾಪಗಳ ಕೊನೆ (ತೀರಿಸಲ್ಪಡುವಿಕೆ) ಸೈತಾನನೇ ಇಲ್ಲದ್ದರಿಂದ ಪಾಪಕ್ಕೆ ಪ್ರೇರೆಪಣೆ ಇಲ್ಲದ ಜೀವಿತವಾಗಿರುತ್ತದೆ.

10) ಅಪರಾಧವೆಂಬುದು ಇಲ್ಲವೇ ಇಲ್ಲ, ಎಲ್ಲೆಲ್ಲಿಯೂ ಜನರಲ್ಲಿ ಶಾಂತಿ, ಪ್ರಮಾಣಿಕತೆ, ಸತ್ಯತೆ, ಪ್ರೀತಿ, ಮಮತೆ ತುಂಬಿರುತ್ತದೆ, ಪೋಲಿಸರಿಲ್ಲದ ಆಡಳಿತವಾಗಿರುತ್ತದೆ ಯಾಕೆಂದರೆ ಅಪರಾಧಗಳನ್ನು ಮಾಡುವವರೇ ಇಲ್ಲ.

11) ಸನಾತನ ಧರ್ಮವು ಸ್ಥಾಪಿಸಲ್ಪಡುತ್ತದೆ (ದಾನಿ. 9:24).

12) ಕನಸನ್ನೂ ಪ್ರವಾದಿಯ ನುಡಿಯನ್ನೂ ಮುದ್ರೆ ಹಾಕಿ ಯಥಾರ್ಥ ಮಾಡುವುದು ಅಂದರೆ ಪ್ರವಾದನೆ ನೆರವೇರುವಂತಹ ಸಮಯವಾಗಿದೆ, ದಾನಿಯೇಲನ ಪ್ರವಾದನೆ ಮತ್ತು ಕನಸು ನೆರವೇರುವಂತಹ ದಿನಗಳು ಇವು.

13) ಅತಿ ಪರಿಶುದ್ಧವಾದುದನ್ನು ಅಭಿಷೇಕಿಸುವುದು, ಆಳುವುದಕ್ಕೆ ದೇವಜನರಿಗೊಂದು ಅಭಿಷೇಕವು ಸಿಗುತ್ತದೆ (ದಾನಿ. 9:24).

**ಈ ಕಾಲದ ಜನರ ಆತ್ಮೀಕ ಸ್ಥಿತಿ :** ಜೆಕ. 14:16 ಅನಂತರ ಯೆರುಸಲೇಮಿನ ಮೇಲೆ ಬಿದ್ದ ಸಕಲ ಜನಾಂಗಗಳಲ್ಲಿ ಉಳಿದವರೆಲ್ಲರೂ ಸೇನಾಧೀಶ್ವರ ಯೆಹೋವನೆಂಬ ರಾಜಾಧಿ ರಾಜನನ್ನು ಆರಾಧಿಸುವುದಕ್ಕೂ ಪರ್ಣಶಾಲೆ ಹಬ್ಬವನ್ನು ಆಚರಿಸುವುದಕ್ಕೂ ಪ್ರತಿ ವರುಷವೂ ಹೊರಟು ಬರುವರು. ಈ ಕಾಲದಲ್ಲಿ ಜನರು ಆತ್ಮೀಕವಾಗಿ ಉನ್ನತ ಮಟ್ಟದಲ್ಲಿರುತ್ತಾರೆ. ಇಸ್ರಾಯೇಲ್ಯರು ಕ್ರಿಸ್ತನನನ್ನು ಮೇಸ್ಸಿಯನನ್ನಾಗಿ ಅಂಗೀಕರಿಸಿರುವುದರಿಂದ ಯೆಹೂದ್ಯರೆಲ್ಲರೂ ಕ್ರಿಸ್ತನನ್ನೇ ಆರಾಧಿಸುವರು. ಯಾವನು ಸೇನಾಧೀಶ್ವರನಾದ ಯೆಹೋವನನ್ನು ಆರಾಧಿಸುವುದಕ್ಕೆ ಬರುವುದಿಲ್ಲವೋ ಅಂಥವರಿಗೆ ಎರಡು ರೀತಿಯ ದಂಡನೆಯುಂಟಾಗುತ್ತದೆ.

1) ಅಂಥವರಿಗೆ ಮಳೆ ಬರುವುದಿಲ್ಲ (ಜೆಕ. 14:17).

2) ಯೆಹೋವನು ತಗಲಿಸುವ ಬಾಧೆಯು ಇವರಿಗೆ ತಗಲುತ್ತದೆ (ಜೆಕ. 14:18).

**ಸಾವಿರ ವರ್ಷಗಳ ದೇವಾಲಯ ಮತ್ತು ಆರಾಧನೆ :** ಯೆಶಾ. 66:22 ಈ ಕಾಲದಲ್ಲಿ ದೇವರಾಧನೆಯು ಪುನ:ಸ್ಥಾಪಿಸಲ್ಪಟ್ಟು ಪ್ರತಿಯೊಬ್ಬನು ದೇವರನ್ನು ಆರಾಧನೆ ಮಾಡುವುದಕ್ಕಾಗಿ ಯೆರೂಸಲೇಮಿಗೆ ಬರುವನು.

**ಈ ಕಾಲದಲ್ಲಿ ದೇವಾಲಯವು ಯಾಕೆ ?**

1) **ಶಾಪಗಳ ಮೇಲಿರುವ ಜಯುವನ್ನು ಪ್ರಕಟಿಸಲು:** ಆಕಾಶದಿಂದ ಬೆಂಕಿ ಗಂಧಕಗಳು ಸುರಿದು ಶಾಪವಾಗಿ ಮಾರ್ಪಟ್ಟ ಭೂಮಿ ಈ ಆಡಳಿತ ಕಾಲದಲ್ಲಿ ವ್ಯವಸ್ಥಿತವಾಗಿ ಪುನ:ಸ್ಥಾಪನೆಗೊಂಡಿತು ಎಂಬುದರ ಗುರುತೇ ಆಗಿದೆ ಈ ದೇವಾಲಯ. ಇಲ್ಲಿಯವರೆಗೆ (ಸಾವಿರ ವರ್ಷಗಳ ಮುಂಚೆ) ಇದ್ದ ಭೂಮಿಯಲ್ಲಿ ದೇವಾಲಯಗಳು ಇದ್ದರೂ ಭೂಮಿಯಲ್ಲಿ ಶಾಪವಿತ್ತು, ಜನರು ಶಾಪದಿಂದ ಅನೇಕರು ವಿವಿಧ ನೋವು, ಸಮಸ್ಯೆಗಳನ್ನು ಅನುಭವಿಸಿದ್ದರು. ಈಗ ಸಾವಿರ ವರುಷಗಳಲ್ಲಿ ಶಾಪದಿಂದ ಪರಿಪೂರ್ಣ ಬಿಡುಗಡೆಗೊಂಡಿರುತ್ತದೆ.

2) **ಯಜ್ಞಗಳನ್ನು ಅರ್ಪಿಸಲು :** ಹಳೆಒಡಂಬಡಿಕೆಯಲ್ಲಿ ಭಕ್ತರು ದೇವರನ್ನು ಸಮೀಪಿಸುವುದಕ್ಕಾಗಿ ಮತ್ತು ಪಾಪಗಳ ಕ್ಷಮಾಪಣೆಗಾಗಿ ನಂಬಿಕೆಯಿಂದ ದೇವರಿಗೆ ವಿಧವಿಧವಾದ ಯಜ್ಞಗಳನ್ನು ಅರ್ಪಿಸುತ್ತಿದ್ದರು. ಆದರೆ ಕರ್ತನಾದ ಯೇಸುಕ್ರಿಸ್ತನು ಕಲ್ವಾರಿಯಲ್ಲಿ ಅರ್ಪಿಸಿದ ಯಜ್ಞದ ನೆನಪಿಗಾಗಿ ಈ ಆಲಯದಲ್ಲಿ ನಿರಂತರವಾಗಿ ನೆನಪಿನ

ಯಜ್ಞಗಳು ನಡೆಯುತ್ತಲಿರುತ್ತವೆ.

3) **ದೇವರ ಪ್ರಸನ್ನತೆ ಮನುಷ್ಯನೊಂದಿಗಿರಲು :–** ಅನೇಕ ಸಾವಿರ ವರ್ಷಗಳಿಂದ ಮನುಷ್ಯನೊಂದಿಗೆ ವಾಸಮಾಡಬೇಕೆಂದು ದೇವರ ಬಯಕೆ ಈ ಆಲಯದ ಮೂಲಕ ನೆರವೇರಿ ದೇವರು ಮನುಷ್ಯರ ಮಧ್ಯದಲ್ಲಿ ವಾಸಮಾಡುವನು.

4) **ದೈವೀಕ ಪರಿಶುದ್ಧತೆಯನ್ನು ತೋರಿಸಲು :–** ಸಾವಿರ ವರುಷಗಳ ಹಿಂದೆ ಜನರು ಪರಿಶುದ್ಧತೆಯಿಂದ ಪರಿಶುದ್ಧತೆಗೆ ಹೋಗುತ್ತಿದ್ದರು. ಈ ಆಲಯದ ಮೂಲಕ ದೈವೀಕ ಪರಿಶುದ್ಧತೆಯನ್ನು ಎಲ್ಲಾ ಜನರು ನೋಡುವರು.

5) **ಆಡಳಿತದ ರಾಜಧಾನಿ :–** ಸಾವಿರ ವರುಷಗಳ ಕಾಲದ ಆಡಳಿತ ಕೇಂದ್ರವು ಯೆರುಸಲೇಮ ಪಟ್ಟಣ ಹಾಗೂ ಅದರಲ್ಲಿರುವ ದೇವಾಲಯವಾಗಿರುತ್ತದೆ.

6) ದೇವಾಲಯದ ಮಹತ್ವವನ್ನು ಜನರಿಗೆ ತೋರಿಸಲು.

7) ದೇವಾಲಯದ ಯಥಾರ್ಥವಾದ ಸೇವೆಯನ್ನು ಪ್ರಕಟಿಸಲು.

8) ಜನರು ದೇವಾಲಯಕ್ಕಿಂತ ಹೆಚ್ಚಿನವನಾದ ಕ್ರಿಸ್ತನನ್ನು ಪ್ರೀತಿಸಲು.

9) ಜನರು ದೈವೀಕ ಜ್ಞಾನದಿಂದ ತುಂಬಲು (ಯೆಶಾ. 11:9).

10) ಜನರು ದೇವಾಲಯದ ಕುರಿತು ಹೇಗೆ ನಡಕೊಳ್ಳಬೇಕೆಂದು ಕಲಿತುಕೊಳ್ಳಲು.

**ಯೆರೂಸಲೇಮು ಪ್ರಪಂಚದ ಆರಾಧನೆಯ ಕೇಂದ್ರ ಸ್ಥಳವಾಗಿರುತ್ತದೆ:–**

1) ಪಟ್ಟಣವು ತಲಾತಲಾಂತರದವರೆಗಿರುತ್ತದೆ (ಯೆಶಾ. 60:15).

2) ಈ ಪಟ್ಟಣವು ದೇವರ ಮಹಿಮೆಗಾಗಿ ವಿಸ್ತರಿಸಲ್ಪಡುತ್ತದೆ (ಯೆರೆ. 31:38).

3) ಈ ಪಟ್ಟಣವು ದೇವರಿಗೆ ಮಹಿಮೆಯನ್ನುಂಟು ಮಾಡುತ್ತದೆ (ಯೆರೆ. 30:18, ಯೋವೆ. 3:17).

4) ಅರಸನಾದ ಯೇಸುಕ್ರಿಸ್ತನು ಸ್ವತ: ಈ ಪಟ್ಟಣವನ್ನು ಸಂರಕ್ಷಿಸುವನು (ಯೆಶಾ. 26:1–6).

5) ವಿಶ್ವದ ಆರಾಧನೆಯ ಕೇಂದ್ರವಾಗಿರುತ್ತದೆ (ಯೆರೆ. 30:14–21).

6) ಪಟ್ಟಣವು ಜನಾಂಗಗಳಿಗಾಗಿ ಸದಾಕಾಲವು ತೆರೆದಿರುತ್ತದೆ (ಯೆಶಾ. 35:8–9).

7) ಮಹಾಸಂಕಟ ಕಾಲದಲ್ಲಿ ಈ ಪಟ್ಟಣಕ್ಕೆ ಉಂಟಾದ ಎಲ್ಲಾ ಹಾನಿಗಳನ್ನು ನಿವಾರಿಸಿ ಪಟ್ಟಣವನ್ನು ಕ್ರಿಸ್ತನು ಪುನ:ಸ್ಥಾಪಿಸುತ್ತಾನೆ (ಯೆಶಾ. 49:19, 61:45).

8) ಅಂತ್ಯಕಾಲದಲ್ಲಿ ಯೆಹೋವನ ಮಂದಿರದ ಬೆಟ್ಟವು ಬೆಟ್ಟಗುಡ್ಡಗಳಿಗಿಂತ ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವುದು (ಯೆಶಾ. 2:2).

9) ಪ್ರಂಪಚದ ಎಲ್ಲಾ ಜನರು ಆರಾಧನೆಗಾಗಿ ಯೆರುಸಲೇಮಿಗೆ ಬರುವರು. ಆಗ ಸಕಲ ದೇಶಗಳವರು ಅದರ ಕಡೆಗೆ ಪ್ರವಾಹಗಳಂತೆ ಬರುವರು (ಯೆಶಾ. 2:2).

10) ಹೊರಟು ಬಂದ ಬಹು ಜನಾಂಗದವರು ಬನ್ನಿರಿ ಯೆಹೋವನ ಪರ್ವತಕ್ಕೆ ಯಾಕೋಬ್ಯರ ದೇವರ ಮಂದಿರಕ್ಕೆ ಹೋಗೋಣ ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು. ನಾವು ಆತನ ದಾರಿಗಳಲ್ಲಿ ನಡೆಯುವೆವು ಎಂದು ಹೇಳುವರು (ಯೆಶಾ. 2:3).

11) ಚೀಯೋನಿನಿಂದ ಧರ್ಮೋಪದೇಶವು ಯೆರುಸಲೇಮಿನಿಂದ ಯೆಹೋವನ ವಾಕ್ಯವೂ ಹೊರಡುವವು (ಯೆಶಾ. 2:3).

12) ಆ ದಿನದಲ್ಲಿ ಯೆಹೋವನು ದಯಪಾಲಿಸುವ ಬೆಳೆಯಿಂದ ಇಸ್ರಾಯೇಲ್ಯರಲ್ಲಿ ಉಳಿದವರಿಗೆ ಸೌಂದರ್ಯವೂ, ಮಹಿಮೆಯೂ ಉಂಟಾಗುವವು. ದೇಶದ ಫಲದಿಂದ ಉನ್ನತಿಯೂ, ಭೂಷಣವೂ ಲಭಿಸುವವು ಮತ್ತು ಚೀಯೋನಿನಲ್ಲಿ ಉಳಿದವರು ಯೆರೂಸಲೇಮಿನಲ್ಲಿ ನಿಂತವರು ಅಂತು ಜೀವಬಾಧ್ಯರಪಟ್ಟಿಯಲ್ಲಿ ಹೆಸರು ಬಿದ್ದ ಯೆರೂಸಲೇಮಿನವರೆಲ್ಲರೂ ದೇವರ ಜನರೆನಿಸಿಕೊಳ್ಳುವರು. ಆಗ ಕರ್ತನಾದ ಯೆಹೋವನು ನ್ಯಾಯತೀರ್ಪಿನ ಆತ್ಮದಿಂದಲೂ, ದಹಿಸುವ ಆತ್ಮದಿಂದಲೂ ಚೀಯೋನಿನ ಸ್ತ್ರೀಯರ ಕಲ್ಮಶವನ್ನು ಯೆರೂಸಲೇಮಿನ ಮಧ್ಯದಲ್ಲಿನ ರಕ್ತವನ್ನು ತೊಳೆದು ಬಿಟ್ಟ ಮೇಲೆ ಚೀಯೋನ್ ಪರ್ವತದ ಸಂಪೂರ್ಣ ಮಂದಿರದ ಮೇಲೆಯೂ, ಅಲ್ಲಿನ ಕೂಟಗಳ ಮೇಲೆಯೂ, ಹಗಲಲ್ಲಿ ದೂಮ ಮೇಘವನ್ನು ಇರುಳಲ್ಲಿ ಪ್ರಜ್ವಲಿಸುವ ಅಗ್ನಿಯ ಪ್ರಕಾಶವನ್ನು ಉಂಟು ಮಾಡುವನು. ಈ ಪ್ರಭಾವದ ಮೇಲೆಲ್ಲಾ ಆವರಣವಿರುವುದು. ಹಗಲಿನ ಬಿಸಿಲಲ್ಲಿ ನೆರಳನ್ನು ಸಣ್ಣ ದೊಡ್ಡ ಮಳೆಗಳಲ್ಲಿ ಆಶ್ರಯವನ್ನು ಕೊಡುವ ಮಂಟಪವಿರುವುದು.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಜ್ಞಾನಿಗಳು ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರು. ಬಹುಜನರನ್ನು ಸದ್ಧರ್ಮಿಗಳನ್ನಾಗಿ ಮಾಡುವವರು. ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು (ದಾನಿ. 12:3).

## ಭಕ್ತರ ಹೇಳಿಕೆಗಳು:

ಡಾ॥ ಸೂಲನ್ ಎಂಬ ಸೇವಕ. **“ಆಹಾ! ಮರಣವು ಎಷ್ಟು ರಮ್ಯವಾದದು, ನನಗೆ ಬಲವಿದ್ದರೆ ಮರಣದಿಂದ ಬರುವ ಮಹಿಮೆಯನ್ನು ನಾನು ವಿವರಿಸಲಾಷಿಸುತ್ತೇನೆ”** ಎಂದರು. ಮಾರ್ಗರೆಟ್ ಎಂಬ ಸಹೋದರಿ, “ನಿತ್ಯವು ನನ್ನ ಮುಂಭಾಗದಲ್ಲಿ ಸಾಗರದಂತೆ ಆನಂದದಿಂದ ನೃತ್ಯಮಾಡುತ್ತದೆ” ಎಂದಳು ಇನ್ನೂ ಬರೆಯುತ್ತಲೇ ಹೋಗಬಹುದು. ಆದರೆ ಕ್ರಿಸ್ತನಿಲ್ಲದವರ ಮರಣ? ಅದು ಘೋರವಾದದು, ಸಂಕಟದಿಂದ ಕೂಡಿದದೂ ಆಗಿದೆ. ನಾಸ್ತಿಕವಾದಿ ವಾಲ್‌ಡೇರ್ **“ಅಯ್ಯೋ, ಮಾನವನಿಂದಲೂ, ದೇವರಿಂದಲೂ ಕೈಬಿಡಲ್ಪಟ್ಟೆನಲ್ಲಾ”** ಎಂದನು. ರೋಮಾಯ ಚಕ್ರವರ್ತಿಯಾದ ಸೀಸರ್, ತನ್ನನ್ನು ಇರಿದವನನ್ನು “ಅಯ್ಯೋ, ಬ್ರೂಟಸ್ಸನೇ, ನೀನಾ?” ಎಂದನು. ಆರ್ಕಿಮಿಡೀಸನು ಸಾಯುವಾಗ, ತಾನು ನೆಲದಲ್ಲಿ ಬರೆದಿದ್ದ ಚಿತ್ರಗಳನ್ನು ತೋರಿಸಿ “ಇವುಗಳನ್ನು ಅಳಿಸಿಬಿಡ ಬೇಡಿರಿ” ಎಂದನು. ಫ್ರಾನ್ಸ್ ದೇಶದ ಅರಸ “ಅಯ್ಯೋ, ಎಷ್ಟು ರಕ್ತ, ಎಷ್ಟು ಕೊಲೆಗಳು ಅಯ್ಯೋ, ನಾನು ಅನ್ಯಾಯದ ಆಲೋಚನೆಗಳನ್ನೇ ಹಿಂಬಾಲಿಸಿದೆನಲ್ಲಾ”ಎಂದು ಹಂಬಲಿಸಿದನು. ಮಿರಾಬು ಎಂಬ ನಾಸ್ತಿಕನು ನಿತ್ಯವನ್ನು ನೆನೆದರೆ ನಡುಕವಾಗಿದೆಯಲ್ಲಾ, ನನಗೆ ಮೂರ್ಛೆಯ ಔಷಧಿಯನ್ನು ಕೊಡಿರಿ” ಎಂದನು. ನನ್ನ ಪ್ರಿಯ ಸ್ವಾಮಿಯಾದರೋ, ಪೂರ್ಣ ಸಮಾಧಾನದಿಂದ, ಯಾವದೇ ಸಂದರ್ಭಗಳು ಪರಿಸ್ಥಿತಿಗಳಿದ್ದಾಗ್ಯೂ, ಜಯದೊಂದಿಗೆ ಸಂತೋಷದಿಂದ “ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗಳಲ್ಲಿ ಒಪ್ಪಿಸಿಕೊಡುತ್ತೇನೆ” ಎಂದು ಹೇಳಿ ಪ್ರಾಣಬಿಟ್ಟನು. ತಂದೆಯೊಂದಿಗೆ ಆತನಿಗಿದ್ದ ಸಂಬಂಧ ನಮ್ಮನ್ನು ಪರವಶಗೊಳಿಸುತ್ತದೆಯಲ್ಲವೇ?

**– ಸಂಗ್ರಹ.**

---

**ನಗೆಹನಿ**

ಗುಂಡ ಹೊಟ್ಟೆ ತುಂಬಾ ಕುಡಿದು ನಡು ರಸ್ತೆಯಲ್ಲಿ ತೂರಾಡುತ್ತಾ ಬರುತ್ತಿದ್ದನು. ಅವನು ಇದ್ದಕ್ಕಿದ್ದಂತೆ ಆಕಾಶವನ್ನು ನೋಡಿದನು. ಅಲ್ಲಿ ಮೂಡಿರುವುದು ಚಂದ್ರನೇ ಅಥವಾ ಸೂಯನೇ ಎಂಬುದು ಗೊತ್ತಾಗಲಿಲ್ಲ. ಅಲ್ಲಿಯೇ ಕುಡಿದು ತೂರಾಡುತ್ತಾ ಬಿದ್ದಿದ್ದ ಇನ್ನೊಬ್ಬ ಕುಡುಕನ ಬಳಿಗೆ ಬಂದು ಕೇಳಿದನು.

“ಗೆಳೆಯಾ, ಆಕಾಶದಲ್ಲಿ ಮೂಡಿರುವವನು ಚಂದ್ರನೇ ಅಥವಾ ಸೂರ್ಯನೇ?”

“ಗೆಳೆಯ, ನಾನು ಊರಿಗೆ ಹೊಸಬ. ನನಗೆ ಗೊತ್ತಿಲ್ಲ. ನನ್ನನ್ನು ಬಿಟ್ಟುಬಿಡು.”

---

## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

**“ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;**
**ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ.”** ಜ್ಞಾನೋಕ್ತಿ 22:9.

ನಾವು ನಮ್ಮ ನಿರೀಕ್ಷೆಯಿಂದುಂಟಾಗುವ ಉತ್ಸಾಹವನ್ನೂ ಕಡೇ ತನಕ ದೃಢವಾಗಿ ಹಿಡಿದುಕೊಂಡವರಾದರೆ ನಾವೇ ದೇವರ ಮನೆಯವರು (ಇಬ್ರಿ. 3:6).

# ತೀರ್ಮಾನಗಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

6) **ಯೆಹೋಶುವನ ತೀರ್ಮಾನ :– "ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು"** (ಯೆಹೋ. 24:15). ದೇವರು ಅಬ್ರಹಾಮನನ್ನು, ಲೋಟನನ್ನು, ನೋಹನನ್ನು ಮಾತ್ರವಲ್ಲದೆ ಐಗುಪ್ತ್ಯ ದೇಶದಲ್ಲಿರುವ ಇಸ್ರಾಯೇಲ್ಯರನ್ನು ಪರಮ ಕಾನಾನಿಗೆ ಕರೆಯುವಾಗ ಕುಟುಂಬವಾಗಿ ಕರೆದದ್ದನ್ನು ನಾವು ಕಾಣಬಹುದು. **"ನೀನು ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು. ಆಗ ನೀನು ರಕ್ಷಣೆ ಹೊಂದುವಿ. ನಿನ್ನ ಮನೆಯವರೂ ರಕ್ಷಣೆ ಹೊಂದುವರು"** (ಅ.ಕೃ. 16:31). ಪ್ರಿಯನೇ, ಇಂದು ನಿನ್ನ ಕುಟುಂಬದಲ್ಲಿ ನೀನೊಬ್ಬನೇ ರಕ್ಷಣೆ ಹೊಂದಿರಬಹುದು. ರಕ್ಷಣೆ ಹೊಂದಿದ ನೀನು ನಿನ್ನ ಕುಟುಂಬದಲ್ಲಿ ಕ್ರಿಸ್ತನ ಸಾಕ್ಷಿಯಾಗಿ ಬಾಳುತ್ತಿರುವಿಯಾ? ಮತ್ತು ನಿನ್ನ ಕುಟುಂಬದವರೆಲ್ಲರೂ ರಕ್ಷಣೆ ಹೊಂದಬೇಕಾದರೆ ನೀನು ಪ್ರಾರ್ಥಿಸುತ್ತಿದ್ದೆಯಾ? ಆ ಕುರಿತು ಭಾರ ನಿನಗಿದೆಯಾ? ಒಂದು ವೇಳೆ ನಿನ್ನಲ್ಲಿ ಕುಟುಂಬದ ಕುರಿತಾಗಿ ಈ ಭಾರವನ್ನು ಹೊಂದಿಕೋ. ಇಲ್ಲದಿದ್ದರೆ ನಿನ್ನ ಕುಟುಂಬವು ನರಕದ ಬೆಂಕಿಯಲ್ಲಿ ಬೇಯುತ್ತಿರುವುದನ್ನು ನೀನು ಕಾಣಬೇಕಾಗಿದೆ. ಕುಟುಂಬವಾಗಿ ಈ ಕುರಿತಾಗಿ ಒಂದು ತೀರ್ಮಾನವು ನಿನ್ನಲ್ಲಿ ಎದ್ದೇಳಲಿ ಇಂದು ರಕ್ಷಣೆ ಹೊಂದಿದ ಅನೇಕರು ಕುಟುಂಬದಲ್ಲಿ, ಸ್ನೇಹಿತರ ಮಧ್ಯದಲ್ಲಿ ಅವರಿಗೆ ತಕ್ಕಂತೆ ಒಂದಾಗಿ ಜೀವಿತ ಜೀವಿಸಿ ಅವರ ರಕ್ಷಣೆಗೆ ಇವರು ತಡೆಯಾಗಿರುತ್ತಾರೆ. ಪ್ರಿಯನೇ, ಒಂದು ತೀರ್ಮಾನದೊಂದಿಗೆ ಜೀವಿಸಿ, ಕುಟುಂಬದ ರಕ್ಷಣೆಗಾಗಿ ಸಹಕರಿಸು.

**ವಯಸ್ಕರ ಸ್ವರ**

7) **ಹಬಕ್ಕೂಕನ ತೀರ್ಮಾನ :–** 'ಹಬ್ಬಕ್ಕೂಕನು' ಅಂದರೆ 'ತಬ್ಬಿಕೊಳ್ಳುವನು' ಎಂದರ್ಥ. ನಿಜವಾಗಿಯೂ ಹಬಕ್ಕೂಕನು ದೇವರಲ್ಲಿ ಸಂತೋಷವಾಗಿರುತ್ತಾ ದೇವರನ್ನು ತಬ್ಬಿಕೊಳ್ಳುತ್ತಾ ಜೀವಿಸುವನು. ಹಬಕ್ಕೂಕನು ತನಗೆ ಪ್ರತಿಕೂಲ ಸಮಯದಲ್ಲಿ ಎಲ್ಲಾ ಉತ್ಪತ್ತಿ ಶೂನ್ಯವಾಗಿ, ಎಲ್ಲವನ್ನು ಕಳೆದುಕೊಂಡರೂ ದೇವರಲ್ಲಿ ಸಂತೋಷಿಸುವವನಾಗಿದ್ದನು (ಹಬ. 3:17–18). ಅನೇಕ ವೇಳೆ ಸಂತೋಷವಿದ್ದರೆ ನಾವು ಕೈ ತಟ್ಟುತ್ತೇವೆ, ಹೋರಾಟವಿದ್ದರೆ ಕೈ ಕಟ್ಟುತ್ತೇವೆ. ಪಕ್ಕದಲ್ಲಿರುವವರು ನಮ್ಮನ್ನು ಒಂದು ತಟ್ಟಬೇಕಾಗಿದೆಯಷ್ಟೆ. ಇಕ್ಕಟ್ಟಾದ ಸಮಯದಲ್ಲೂ, ಶೂನ್ಯವಾಗಿರುವ ಸಮಯದಲ್ಲಿಯೂ ಕರ್ತನಲ್ಲಿ ಸಂತೋಷಿಸಬೇಕಾಗಿದೆ. 'ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ' (ಫಿಲಿ. 4:4). ಪ್ರವಾದಿಯಾದ ಹಬಕ್ಕೂಕನು ಏನೇ ಬಂದರೂ ಕರ್ತನಲ್ಲಿ ಸಂತೋಷಿಸುವ ತೀರ್ಮಾನವನ್ನು ಕೈಗೊಂಡನು. ಅನೇಕ ವೇಳೆ ಕೆಲವರು ಆರಾಧನೆಯಲ್ಲಿ ಎಲ್ಲಾ ತರದ ಭಾರವನ್ನು, ಕಹಿ, ವೈಮನಸ್ಸನ್ನು ಇಟ್ಟುಕೊಂಡು ಆರಾಧನೆಯಲ್ಲಿ ಪಾಲುಗೊಳ್ಳುವುದರಿಂದ ಕರ್ತನಲ್ಲಿ ಸಂತೋಷಿಸದೆ ಯಾಂತ್ರಿಕವಾಗಿ ಆರಾಧನೆ ಮಾಡುವುದರಿಂದ ಅವರಿಗೆ ಯಾವ ಪ್ರಯೋಜವಿಲ್ಲದೆ ಹೋಗುವುದು, ದಾವೀದನ ಮಾತುಗಳು ನಮಗೆ ನಿಜವಾಗಿ ಕರ್ತನಲ್ಲಿ ಸಂತೋಷಿಸುವಂತೆ ಮಾಡುತ್ತದೆ. **"ಧಾನ್ಯ ದ್ರಾಕ್ಷೆಗಳು ಸಮೃದ್ಧಿಯಾಗಿ ಬೆಳೆದ ಸುಗ್ಗಿಕಾಲದಲ್ಲಿ ಅವರಿಗಿರುವ ಸಂತೋಷಕ್ಕಿಂತಲೂ ನೀನು ನನ್ನ ಹೃದಯದಲ್ಲಿ ಹೆಚ್ಚಾದ ಆನಂದವನ್ನು ಉಂಟುಮಾಡಿದ್ದೀ"** (ಕೀರ್ತ. 4:7).

8) **ಜಕ್ಕಾಯನ ತೀರ್ಮಾನ: –** 'ಜಕ್ಕಾಯ' ಎಂದರೆ ಪರಿಶುದ್ಧತೆವುಳ್ಳವನು ಎಂದರ್ಥ. ಆದರೆ ಆ ಹೆಸರಿಗೆ ವಿರುದ್ಧವಾಗಿ ಜೀವಿಸಿದ ಜಕ್ಕಾಯ ಯಾವಾಗ ಯೇಸು ಆತನಲ್ಲಿಗೆ ಬಂದರೋ ಆಗಲೇ ನಿಜವಾದ ತೀರ್ಮಾನವು ಅವನಲ್ಲಿ ಬಂದಿತು (ಲೂಕ. 19:8). ಅನ್ಯಾಯ ಮಾಡಿದವರಿಗೆ 4ರಷ್ಟು ಹಿಂತಿರುಗಿಸಿ ಆಸ್ತಿಯಲ್ಲಿ 1/2 ದಷ್ಟು ಬಡವರಿಗೆ ಕೊಡುವ ತೀರ್ಮಾನದಲ್ಲಿ ಆತನ ಜೀವಿತದ ಬದಲಾವಣೆಯ ಸೂಚನೆ ಕಂಡು ಬಂದಿತು. ಕ್ರಿಸ್ತನಲ್ಲಿ ಬಂದಾಗ ಹಳೆದು ಹೋಗಿ ಎಲ್ಲಾ ನೂತನವಾಗುವುದು (2 ಕೊರಿ. 5:17). ಆದರೆ ಹಳೇದನ್ನು ಬಿಟ್ಟು ಬಿಡುವಾಗಲೇ ದೇವರು ಹೊಸ ಕಾರ್ಯವನ್ನು ಮಾಡುವನು. **"ಹಳೇ ಸಂಗತಿಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಡಿರಿ. ಪುರಾತನ ಕಾರ್ಯಗಳನ್ನು ಮರೆತುಬಿಡಿ. ಇಗೋ ಹೊಸ ಕಾರ್ಯವನ್ನು ಮಾಡುವೆನು** (ಯೆಶಾ. 43:18–19). ದೇವ ಮಗುವೇ, ನಿನ್ನ ತೀರ್ಮಾನಗಳು ದೃಢವಾಗಿರಲಿ. **"ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ"** (ರೋಮ. 11:33).

ಮುಂದುವರಿಯುವದು.......

**ಪಾ॥ ರೊನಾಲ್ಡ್ ಮಚಾದೋ**
ಬೇತೇಲ್ ಚರ್ಚ್, ಕಾಮಗೆರೆ.

ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು; ಆತನು ನಿನ್ನನ್ನು ಉದ್ಧಾರಮಾಡುವನು.
ನೀತಿವಂತನನ್ನು ಎಂದಿಗೂ ಕದಲಗೊಡಿಸನು (ಕೀರ್ತ. 55:22).

## ನಗೆಹನಿ

ಗುಂಡನು ತನ್ನ ಕಾರಿನಲ್ಲಿ ಕುಳಿತು ಸಂತೋಷದಿಂದ ಹಾಡನ್ನು ಕೇಳುತ್ತಿದ್ದನು. ಹಾಡಿನ ಟ್ಯೂನ್ ತುಂಬಾ ಅದ್ಬುತವಾಗಿತ್ತು. ದಾರಿಯಲ್ಲಿ ಹೋಗುತ್ತಿರುವ ಒಬ್ಬನು ಹತ್ತಿರ ಬಂದು ಗುಂಡನನ್ನು ಕೇಳಿದನು.

ದಾರಿಹೋಕ : "ಸಾರ್, ಹಾಡಿನ ಟ್ಯೂನ್ ಯಾವುದು?"

ಗುಂಡ : "ಕಾರ್‌ಟೂನ್".

ದಾರಿಹೋಕನು ತಲೆ ಚಚ್ಚಿಕೊಂಡನು.

---

## ಆಶ್ರಮದ ಅವಶ್ಯಕತೆಗಳು

**1. 30 ಟೇಬಲ್**

**2. 60 ಬೆಂಚ್**

**3. ಟೆಂಪೋ ಟ್ರಾವಲ್ಸ್**

**4. ಅಕ್ಕಿ, ಸಕ್ಕರೆ, ದವಸಧಾನ್ಯ**

**5. 50 ಮಂಚ**

**6. 50 ಹಾಸಿಗೆ**

**7. 50 ದಿಂಬು**

**8. 50 ಬೆಡ್ ಶೀಟ್**

**9. 50 ಹೊದಿಕೆ**

**ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ**

**9902334941, 08202002781, 09964070654.**

---

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೈವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

---

ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆಬೇಕು (ಇಬ್ರಿ. 10:36).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ಪ್ರಾರ್ಥನಾ ಮನವಿಗಳು

- ಕರ್ನಾಟಕದ ಉಜ್ಜೀವನಕ್ಕಾಗಿ, ರಕ್ಷಣೆಗಾಗಿ ಮತ್ತು ಪ್ರತಿಯೊಂದು ಸೇವಕರುಗಳಿಗಾಗಿ, ಸೇವೆಗಳಿಗಾಗಿ ಪ್ರಾರ್ಥಿಸಿರಿ.
- ಪ್ರತಿ ನಿತ್ಯವೂ ನಮ್ಮ ರಾಜ್ಯದ 30 ಜಿಲ್ಲೆಗಳ ಹೆಸರನ್ನು ಹೇಳಿ ಆತ್ಮಭಾರದೊಂದಿಗೆ ಪ್ರಾರ್ಥಿಸೋಣ.
- ದೇವರ ಸ್ವರ ಮಾಸ ಪತ್ರಿಕೆಗಾಗಿ ಮತ್ತು ಎಲ್ಲಾ ಅವಶ್ಯಕತೆಗಳು ಸಂಧಿಸಲ್ಪಡುವದಕ್ಕಾಗಿ ಪ್ರಾರ್ಥಿಸಿರಿ.
- ದೇಶದಲ್ಲಿ, ರಾಜ್ಯದಲ್ಲಿ ನಡೆಯುತ್ತಿರುವ ಆತ್ಯಾಚಾರಗಳು ನೀಗುವಂತೆ, ಪ್ರತಿಯೊಬ್ಬರನ್ನು ಕರ್ತನು ರಕ್ಷಿಸುವಂತೆ ಪ್ರಾರ್ಥಿಸಿರಿ.
- ಕರ್ತನು ತನ್ನ ಮಕ್ಕಳನ್ನು ರಕ್ಷಣೆಯಲ್ಲಿ ದೃಢವಾಗಿ ನಿಲ್ಲಿಸಿ, ಕರ್ತನ ಬರೋಣದಲ್ಲಿ ಪರಿಶುದ್ಧರಾಗಿ ಎತ್ತಲ್ಪಡಲು ಪವಿತ್ರಾತ್ಮನು ಸಹಾಯಮಾಡುವಂತೆ ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿ, ರಾಜ್ಯದಲ್ಲಿರುವ ಬರಗಾಲ, ಬಡತನ, ಕ್ಷಮಾ, ಭಯೋತ್ಪಾದನೆ, ಭ್ರಷ್ಟಾಚಾರ, ಮೋಸವಂಚನೆ ನೀಗಿ ದೇಶದಲ್ಲಿ ಸಮಾಧಾನ, ಸಮೃದ್ಧಿ ಉಂಟಾಗುವಂತೆ ಪ್ರಾರ್ಥಿಸಿರಿ.
- ದೇವರು ತನ್ನ ಮಕ್ಕಳನ್ನು ಎಲ್ಲಾ ಅಂಟುರೋಗಗಳಿಂದ ರಕ್ಷಿಸಿ ಕಾಪಾಡುವಂತೆ ಪ್ರಾರ್ಥಿಸಿರಿ. (ವಿಮೋ. 15:26).

**ಭಕ್ತರ ಹೇಳಿಕೆಗಳು :** ಭಕ್ತನಾದ ಡಿ. ಎಲ್ ಮೂಡಿ ತನ್ನ ಕೊನೇ ಉಸಿರೆಳೆಯುವ ವೇಳೆಯಲ್ಲಿ "ಪ್ರಪಂಚವು ದಾಟಿಹೋಗುತ್ತಿದೆ; ಪರಲೋಕವು ನನಗಾಗಿ ಕಾದಿರಿಸಲ್ಪಟ್ಟಿದೆ. ಆಹಾ! ಅದು ನನ್ನ ಕಿರೀಟಧಾರಣೆಯ ಸಮಯವೆಂದು ಮೊಳಗಿದರು. ಜಾನ್ ನ್ಯೂಟನ್ ಎಂಬ ಭಕ್ತನು **"ನಾನು ಈಗ ಸಾಯುವವರ ದೇಶದಲ್ಲಿದ್ದೇನೆ, ಇನ್ನು ಸ್ವಲ್ಪ ಹೊತ್ತಿನಲ್ಲಿ, ನಿತ್ಯ ಜೀವದಿಂದಿರುವ ದೇಶಕ್ಕೆ ಹೋಗುತ್ತೇನೆ"** ಎಂದರು.

– ಸಂಗ್ರಹ.

ಆದಿಯಿಂದಲೂ ದೇವರೇ ನಿಮಗೆ ನಿವಾಸ ಸ್ಥಾನವಾಗಿದ್ದಾನಲ್ಲಾ; ಸದಾ ದೇವರ ಹಸ್ತವೇ ನಿಮಗೆ ಆಧಾರ (ಧರ್ಮೋ. 33:27).

# ಪ್ರೀತಿ ಮತ್ತು ಕ್ಷಮೆ !

ನಿಮ್ಮ ಪ್ರೀತಿಯು ಸತ್ಯದಲ್ಲಿಯೂ ಕೃತ್ಯದಲ್ಲಿಯೂ ತೋರಿಬರಬೇಕು (1 ಯೋಹಾ. 3:18). ಪ್ರೀತಿ ಹಾಗೂ ಕ್ಷಮೆ ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಪ್ರೀತಿ ಇಲ್ಲದೆ, ಕ್ಷಮೆ ಇಲ್ಲ. ಕ್ಷಮೆ ಇಲ್ಲದೆ ಪ್ರೀತಿ ಇಲ್ಲ. ಆದಿಕಾಂಡದಿಂದ ಪ್ರಕಟಣೆಯ ಗ್ರಂಥದವರೆಗೂ ಧ್ಯಾನಿಸುವದಾದರೆ, ಅಲ್ಲಿ ಕಂಡು ಬರುವದು ದೇವರು ತನ್ನ ಸೃಷ್ಟಿಯಾದ ಮಾನವನ ಮೇಲೆ ಇಟ್ಟಿರುವ ಪ್ರೀತಿ ಹಾಗೂ ಅವನಿಗೆ ನೀಡಿದ ಕ್ಷಮೆಯೇ ಆಗಿದೆ.

ದೇವರು ಮನುಷ್ಯನನ್ನು ಸೃಷ್ಟಿಸುವ ಮೊದಲೇ ಅವನಿಗೆ ಅಗತ್ಯವಾದವುಗಳನ್ನೆಲ್ಲಾ ಸೃಷ್ಟಿ ಮಾಡಿದನು. ಹಾಗೆ ಸೃಷ್ಟಿಸಿದವುಗಳೆಲ್ಲವೂ ಒಳ್ಳೆಯದೆಂದೇ ನೋಡಿದನು ಎಂದು ಆದಿಕಾಂಡದ ಮೊದಲನೆಯ ಅಧ್ಯಾಯದಲ್ಲಿ ಓದುತ್ತೇವೆ. ಅಷ್ಟು ಮಾತ್ರವಲ್ಲ, ತಾನು ಸೃಷ್ಟಿಸಿದ ಎಲ್ಲವುಗಳ ಮೇಲೆ ಅವನಿಗೆ ಅಧಿಕಾರ ಕೊಟ್ಟನು. ಇದಕ್ಕೆ ಪ್ರತಿಯಾಗಿ ಕರ್ತನು ತನ್ನ ಸಾರೂಪ್ಯದಲ್ಲಿ ಸೃಷ್ಟಿಸಿದ ಮಾನವನಿಂದ ಪ್ರೀತಿಯನ್ನೂ ವಿಧೇಯತೆಯನ್ನೂ ಬಯಸಿದನು. ಇದನ್ನು ಪರೀಕ್ಷಿಸುವದಕ್ಕಾಗಿಯೇ ಏದೇನ್ ತೋಟದ ಮಧ್ಯದಲ್ಲಿ ಒಳ್ಳೇದರ ಕೆಟ್ಟದ್ದರ ಅರಿವನ್ನು ಹುಟ್ಟಿಸುವ ಮರವನ್ನು ಇಟ್ಟು, ಅದರ ಹಣ್ಣನ್ನು ತಿನ್ನಬಾರದೆಂದು ಆಜ್ಞಾಪಿಸಿದನು. ಆದರೆ ಆದಾಮ ಹವ್ವರು ಸೈತಾನನ ತಂತ್ರಕ್ಕೆ ಒಳಗಾಗಿ ದೇವರಂತೆ ತಾವೂ ಜ್ಞಾನ ಪಡೆಯಬೇಕೆಂಬ ಸ್ವಾರ್ಥಕ್ಕೆ ಬಲಿಯಾಗಿ ತಮ್ಮ ಸೃಷ್ಟಿಕರ್ತನ ಆಜ್ಞೆಯನ್ನು ಮೀರಿ ತಿನ್ನಬಾರದ ಹಣ್ಣನ್ನು ತಿಂದು ಪಾಪಕ್ಕೆ ಒಳಗಾದರು. ಹಾಗೂ ಅವರ ಅಂತರಾತ್ಮ ಬಾಧಿಸಲು, ದೇವರ ಕಣ್ಣಿಗೆ ತಮ್ಮನ್ನು ಮರೆಮಾಡಿಕೊಳ್ಳಲು ಮರಗಳ ಹಿಂದೆ ಅವಿತುಕೊಂಡರು.

ದೇವರು ಸರ್ವಾಂತರ್ಯಾಮಿ, ಸರ್ವಸೃಷ್ಟಿ ಪರಿಪಾಲಕನೆಂಬುದನ್ನು ಅವರು ಅರಿಯದಾದರು. ಹೀಗಿರುವಾಗ ಆತನ ಕಣ್ಣಿಗೆ ತಪ್ಪಿಸಿಕೊಳ್ಳಲು ಯಾರಿಂದಾದೀತು? ಆದ್ದರಿಂದಲೇ ಕೀರ್ತನೆಗಾರನಾದ ದಾವೀದನು ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ? ಮೇಲಣ ಲೋಕಕ್ಕೆ ಏರಿ ಹೋದರೆ ಅಲ್ಲಿ ನೀನಿರುತ್ತೀ; ಪಾತಾಳಕ್ಕೆ ಹೋಗಿ ಮಲಗಿಕೊಂಡೇನೆಂದರೆ ಅಲ್ಲಿಯೂ ನೀನಿರುವಿ. ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿ ಹೋಗಿ ಸಮುದ್ರದ ಕಟ್ಟಕಡೆಯಲ್ಲಿ ವಾಸ ಮಾಡೇನೆಂದರೆ ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವದು (ಕೀರ್ತ. 139:7–10) ಎಂದು ಹೇಳುತ್ತಾನೆ. ಹೌದು ಪ್ರಿಯರೇ, ಮನುಷ್ಯನು ದೇವರ ಕಣ್ಣಿಗೆ ಮರೆಯಾಗಿ, ಎಲ್ಲಿಹೋಗಲೂ ಸಾಧ್ಯವಿಲ್ಲ, ಏನು ಮಾಡಲೂ ಸಾಧ್ಯವಿಲ್ಲ, ಏನನ್ನೂ ಚಿಂತಿಸಲು ಸಾಧ್ಯವಿಲ್ಲ. ಮನುಷ್ಯನು ಮುಖಗಳನ್ನು ಮಾತ್ರ ನೋಡಬಲ್ಲನು. ಆದರೆ ಕರ್ತನಾದರೋ ಅಂತರಂಗವನ್ನೇ ಹೊಕ್ಕು ನೋಡುವನು.

ಆದಾಮ ಹವ್ವರು ತಮ್ಮ ಅವಿಧೇಯತೆಯಿಂದ ಪಾಪ ಮಾಡಿದಾಗ, ಕರ್ತನ ಹೃದಯ ಎಷ್ಟೋ ವ್ಯಥೆಗೆ ಒಳಗಾಗಿರಬಹುದಲ್ಲವೇ ? ಆತನ ವ್ಯಥೆಗೆ, ಕೋಪಕ್ಕೆ ಕಾರಣವಾದ ಆದಾಮ ಹವ್ವರನ್ನು ಒಂದೇ ಕ್ಷಣದಲ್ಲಿ ನಾಶಗೊಳಿಸಬಹುದಾಗಿತ್ತು, ಆದರೆ ಆತನು ಹಾಗೆ ಮಾಡಲಿಲ್ಲ. ಕಾರಣ ದೇವರು ಪ್ರೀತಿ ಸ್ವರೂಪಿ, ಕರುಣಾಮಯಿ ಹಾಗೂ ಕ್ಷಮಾಶೀಲನು. ತಾನು ಪ್ರೀತಿಯಿಂದ ಸೃಷ್ಟಿಸಿದ ಮನುಷ್ಯನನ್ನು ಕ್ಷಮಿಸಲು ಮುಂದಾದನು. ಅವನು ಮಾಡಿದ ಪಾಪವನ್ನು ಪರಿಹರಿಸಲು ಒಂದು ಯೋಜನೆಯನ್ನು ರೂಪಿಸಲು ತೀರ್ಮಾನಿಸಿದನು. ಆ ಯೋಜನೆಯೇ ನಮ್ಮ ರಕ್ಷಕನೂ, ವಿಮೋಚಕನೂ ಆದ ಯೇಸುಕ್ರಿಸ್ತನ ಜನನ, ಮರಣ, ಪುನರುತ್ಥಾನ, ಸರ್ಪದ ರೂಪದಲ್ಲಿ ಹವ್ವಳನ್ನು ವಂಚಿಸಿದ ಸೈತಾನನನ್ನು ಶಪಿಸುವಾಗ, ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವದು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು. ನೀನು ಅದರ ಹಿಮ್ಮಡಿಯನ್ನು ಕಚ್ಚುವಿ (ಆದಿ. 3:15) ಎಂದನು.

ಏದೇನ್ ತೋಟದಲ್ಲಿ ಒಳ್ಳೇದರ, ಕೆಟ್ಟದ್ದರ ಅರಿವನ್ನು ಹುಟ್ಟಿಸುವ ವೃಕ್ಷ ಇಡಲ್ಪಟ್ಟಂತೆ, ಜೀವವೃಕ್ಷವೂ ಇಡಲ್ಪಟ್ಟಿತ್ತು. ಈ ವೃಕ್ಷದ ಹಣ್ಣನ್ನು ತಿಂದವರಿಗೆ ನಿತ್ಯಜೀವನ ಬಾಧ್ಯತೆ ದೊರಕುವದು. ಆದರೆ ಸೃಷ್ಟಿಕರ್ತನಾದ ದೇವರು ಮನುಷ್ಯನು ಹಾಗೂ ಅವನ ಸಂತತಿ ಈ ಜೀವವೃಕ್ಷದ ಹಣ್ಣನ್ನು ತಿಂದು ಶಾಶ್ವತವಾಗಿ ಪಾಪದಲ್ಲಿ ಜೀವಿಸಿರಬಾರದೆಂದು ಬಯಸಿ, ಆದಾಮ ಹವ್ವರನ್ನು ಏದೇನ್ ತೋಟದಿಂದ ಹೊರಕ್ಕೆ ಅಟ್ಟಿಬಿಟ್ಟನು. ಇಲ್ಲಿಯೂ ದೇವಪ್ರೀತಿಯನ್ನು ಕಾಣಬಹುದು. ಆ ಜೀವವೃಕ್ಷ ಇಂದು ಕರ್ತನಾದ ಯೇಸುಕ್ರಿಸ್ತನೇ ಆಗಿರುವನು. ತಂದೆ ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಮಾನವ ಕುಲದ ರಕ್ಷಣಾರ್ಥವಾಗಿ ಭೂಮಿಗೆ ಕಳುಹಿಸಿ

ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನೂ ತಿಳಿಯುವುದೇ ನಿತ್ಯಜೀವವು (ಯೋಹಾ. 17:3).

ನಮ್ಮೆಲ್ಲರ ಪಾಪಗಳನ್ನೂ, ಅಕ್ರಮಗಳನ್ನೂ, ಶಾಪಗಳನ್ನೂ, ವ್ಯಾಧಿಗಳನ್ನೂ ಪರಿಹರಿಸುವ ಯಜ್ಞದ ಕುರಿಯಾಗಿ ಶಿಲುಬೆಯಲ್ಲಿ ಜಜ್ಜಲು ಒಪ್ಪಿಸಿಕೊಟ್ಟನು. ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನೂ ಸಿದ್ಧಾಂತ ಪಡಿಸಿದ್ದಾನೆ (ರೋಮ. 5:8). ಎಂದು ಅಪೋ ಪೌಲನು ಬರೆಯುತ್ತಾನೆ.

ಪ್ರೀತಿ ಕ್ಷಮೆಗಳೇ ಕ್ರೈಸ್ತತ್ವದ ತಿರುಳಾಗಿದೆ. ಮಾತ್ರವಲ್ಲ, ಇವು ಆತ್ಮೀಕ ಫಲಗಳಾಗಿವೆ (ಗಲಾ. 5:22) ಕರ್ತನು ತನ್ನ ಮಕ್ಕಳಲ್ಲಿ ಈ ಫಲಗಳನ್ನು ನಿರೀಕ್ಷಿಸುವನು. ಪ್ರೀತಿ ಕ್ಷಮೆಗಳು ಇರುವಲ್ಲಿ ಶಾಂತಿ, ಸಮಾಧಾನ, ನೆಮ್ಮದಿ ಇರುವದು. ಅಂತಹ ಹೃದಯಗಳಲ್ಲಿ ಸ್ವಾರ್ಥ, ದ್ವೇಷ, ವೈರತ್ವ, ಕ್ರೌರ್ಯ ಇವುಗಳು ಪ್ರವೇಶಿಸಲು ಸಾಧ್ಯವಿಲ್ಲ. ಪ್ರೀತಿ ಇರುವಲ್ಲಿ ಭಯ ಇರುವದಿಲ್ಲ. ಆತ್ಮನ ಫಲಗಳಲ್ಲೆಲ್ಲಾ ಪ್ರೀತಿ ಪ್ರಾಮುಖ್ಯವಾದದ್ದು. ಆದ್ದರಿಂದಲೇ ಅಪೊ. ಪೌಲನು ಪ್ರೀತಿಯ ಶ್ರೇಷ್ಠತೆಯನ್ನು ಕುರಿತು ಕೊರಿಂಥ ಸಭೆಯವರಿಗೆ ಬರೆಯುವಾಗ, ಹೀಗೆ ಬರೆಯುತ್ತಾನೆ. ನನಗೆ ಪ್ರವಾದನ ವರವಿದ್ದರೂ ಎಲ್ಲಾ ರಹಸ್ಯ ಸಕಲ ವಿದ್ಯೆಯು ತಿಳಿದರೂ, ಬೆಟ್ಟಗಳನ್ನು ತೆಗೆದಿಡುವದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ. ನನಗಿರುವದೆಲ್ಲವನ್ನೂ ಅನ್ನದಾನ ಮಾಡಿದರೂ, ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಿಲ್ಲ (1 ಕೊರಿ. 13:2–3) ಎಂದು.

ಇಂದು ಮಾನವನು ಹೃದಯ ಸ್ವಾರ್ಥದಿಂದ ತುಂಬಲ್ಪಟ್ಟು ಪಾಪವು ಲೋಕದಲ್ಲಿ ಹೆಚ್ಚಾಗುತ್ತಿದೆ. ಸೈತಾನನು ತನ್ನ ಕಾಲಕೊಂಚವೇ ಎಂದು ತಿಳಿದು ಘರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ತಿರುಗಾಡುತ್ತಿರುವನು. ಕ್ರೈಸ್ತ ಕುಟುಂಬಗಳು, ಕ್ರೈಸ್ತಸಭೆಗಳು ಆತನ ಪ್ರಾಮುಖ್ಯವಾದ ಗುರಿಯಾಗಿರುವದು. ಐಶ್ವರ್ಯ, ಹಣ, ಅಧಿಕಾರ, ಸ್ವಾರ್ಥ ಎಂಬ ಕಳೆಗಳನ್ನು ಬಿತ್ತಿ ಆತ್ಮಗಳನ್ನು ನಾಶಪಡಿಸಲು ಸರ್ವ ಪ್ರಯತ್ನಗಳನ್ನು ಮಾಡುತ್ತಿರುವನು. ಕ್ರಿಸ್ತನ ಎರಡನೇ ಬರೋಣದ ಸೂಚನೆಗಳು ಎಲ್ಲೆಲ್ಲೂ ಕಂಡು ಬರುತ್ತಾ ಕಾಲವು ಸಮೀಪವಾಗಿರುವಾಗ ಇಂದು ದೇವಮಕ್ಕಳು ಎಚ್ಚರಗೊಳ್ಳಬೇಕಾಗಿದೆ. ರಕ್ಷಣೆಯನ್ನೂ, ಪರಿಶುದ್ಧತೆಯನ್ನೂ ಕಾಪಾಡಿಕೊಳ್ಳಬೇಕಾಗಿದೆ.

ದೇವಮಕ್ಕಳೇ, ಕ್ರಿಸ್ತನನ್ನು ಅಂಗೀಕರಿಸಿರುವ ನಾವು ಈ ಪ್ರಪಂಚದಲ್ಲಿ ಪ್ರವಾಸಿಗಳಾಗಿರುವವೆಂಬುದನ್ನು ಮರೆಯದಿರೋಣ. ನಾವು ಕ್ರಿಸ್ತೇಸುವಿನ ಮೂಲಕ ಅಬ್ರಹಾಮನ ವಂಶಸ್ಥರೂ, ಆತ್ಮೀಕ ಇಸ್ರಾಯೇಲ್ಯರೂ, ಅಬ್ರಹಾಮನಿಗೆ ಉಂಟಾದ ಎಲ್ಲಾ ಆಶೀರ್ವಾದಗಳಿಗೆ ಬಾಧ್ಯಸ್ಥರೂ ಆಗಿರುವೆವು. ಪರಮ ಕಾನಾನಾದ ಪರಲೋಕ ರಾಜ್ಯಕ್ಕೆ ಹಕ್ಕುದಾರರಾಗಲು ಕರೆಯಲ್ಪಟ್ಟಿದ್ದೇವೆ. ಈ ಸ್ವಾಸ್ಥ್ಯವನ್ನು ಪಡೆಯಬೇಕಾದಲ್ಲಿ ನಾವು ಈ ದೇಹದಲ್ಲಿರುವಾಗಲೇ ಕ್ರಿಸ್ತನ ಆತ್ಮವನ್ನು ಧರಿಸಿಕೊಂಡವರಾಗಿರಬೇಕಾಗಿದೆ. ಯಾವನಿಗಾದರೂ ಕ್ರಿಸ್ತನ ಆತ್ಮ ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ. ಆದರೆ ಕ್ರಿಸ್ತನು ನಿಮ್ಮಲ್ಲಿದ್ದರೆ ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ, ಆತ್ಮವು ನೀತಿಯ ದೆಸೆಯಿಂದ ಜೀವ ಸ್ವರೂಪವಾಗಿದೆ (ರೋಮ. 8:9–10). ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ. ದೇವರಿಗೆ ಬಾಧ್ಯರು ಕ್ರಿಸ್ತನೊಂದಿಗೆ ಬಾಧ್ಯರು. ಹೇಗೆಂದರೆ ಕ್ರಿಸ್ತನ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲೂ ಪಾಲುಗಾರರಾಗುವೆವು (ರೋಮ. 8:17). ಎಂದು ಸತ್ಯವೇದ ಹೇಳುತ್ತದೆ. ಪ್ರಿಯರೇ, ದೇವರು ಉಚಿತವಾಗಿ ಅನುಗ್ರಹಿಸಿರುವ ಪರಲೋಕದ ಬಾಧ್ಯತೆಯನ್ನು ಪಡೆಯಲು ದೈವೀಕ ಸ್ವಭಾವಗಳಾದ ಪ್ರೀತಿ ಹಾಗೂ ಕ್ಷಮೆಗಳನ್ನು ಧರಿಸಿಕೊಂಡವರಾಗಿ, ನಾನು ನನ್ನದು ಎಂಬ ಸ್ವಾರ್ಥವನ್ನು ಬಿಟ್ಟು, ಕರ್ತನೇ ಎಲ್ಲವೂ ನೀನೇ ತಂದೇ ಎಂದು ಆತನಿಗೆ ಸಂಪೂರ್ಣವಾಗಿ ಒಪ್ಪಿಸಿಕೊಡೋಣ.

---

**ನಗೆಹನಿ**

**ರೋಗಿ : ವೈದ್ಯರೇ, ಹೊಟ್ಟೆ ನೋವು**

**ವೈದ್ಯರು : ಗ್ಯಾಸ್ ಇದೆಯಾ?**

**ರೋಗಿ : ನಮ್ಮ ಮನೆಯಲ್ಲಿ ಗ್ಯಾಸ್ ಮುಗಿದು ವಾರವಾಯಿತು ಇನ್ನೂ ಬಂದಿಲ್ಲ.**

ಯೆಹೋವನ ಹಸ್ತವು ರಕ್ಷಿಸಲಾರದಂತೆ ಮೋಟುಗೈಯಲ್ಲ; ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ (ಯೆಶಾ. 59:1).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

## ಓದುಗರಿಗೆ ವಿಶೇಷ ಸೂಚನೆ :

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
**ಡಿಜಿಎಂ ಬೇತೇಲ್ ಕಛೇರಿ,**
**ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Ph: (0820) 2589070, 200 2781
E-mial: dgmofficial@gmail.com

# ನೀತಿವಂತನ ಆಶೀರ್ವಾದಗಳು

ನೀತಿವಂತನು ಅಂದರೆ ಯಾರು ? ದೇವರ ಮುಂದೆ ಸರಿಯಾದ ಸ್ಥಿತಿಯಲ್ಲಿರುವವನು, ಪಾಪ, ಅಪರಾಧ ಮಾಡದೇ ಸರಿಯಾದ ಯೋಗ್ಯ ಸ್ಥಿತಿಯಲ್ಲಿರುವಂಥ ವ್ಯಕ್ತಿಯೇ ನೀತಿವಂತನು. ನಾವು ನೀತಿವಂತರು ಹೇಗೆ ಆಗುತ್ತೇವೆ?

1) ಕರ್ತನಾದ ಯೇಸುಕ್ರಿಸ್ತನ ರಕ್ತದಿಂದ (ರೋಮ. 5:9).

2) ಕೃಪೆಯಿಂದ (ರೋಮ. 3:24).

3) ಪರಿಶುದ್ಧ ಆತ್ಮನಿಂದ (ಗಲಾ. 5:5).

4) ನಂಬಿಕೆಯಿಂದ (ರೋಮ. 3:26).

5) ಕ್ರಿಯೆಗಳ ಮೂಲಕ (ಯಾಕೋ. 2:20–26).

6) ನೀತಿಯನ್ನು ಅನುಸರಿಸುವುದರ ಮೂಲಕ (1 ಯೋಹಾ. 3:7).

7) ಪ್ರಾರ್ಥನೆಯ ಮೂಲಕ (ಯೋಬ. 33:26).

ಸತ್ಯವೇದದಲ್ಲಿ ನೀತಿವಂತನಿಗಾಗಿ ಕರ್ತನು ಅನೇಕ ಆಶೀರ್ವಾದಗಳನ್ನು ಇಟ್ಟಿದ್ದಾನೆ. ಅದನ್ನು ನಾವು ಅರಿತು ನಮ್ಮ ಜೀವಿತದಲ್ಲಿ ಅಂಗೀಕರಿಸಿ, ಅನುಭವಿಸಬೇಕು.

1) ಆತನು ನಿನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನಿನ್ನ ನ್ಯಾಯವನ್ನು ಮಧ್ಯಾಹ್ನದ ತೇಜಸ್ಸಿನಂತೆಯೂ ಪ್ರಕಾಶಗೊಳಿಸುವನು (ಕೀರ್ತ. 37:6). ಉದಯದ ಬೆಳಕು ಯಾವ ರೀತಿಯಲ್ಲಿ ಇರುತ್ತದೆ. ಬೆಳಿಗ್ಗೆ 6 ಘಂಟೆಗೆ ಸ್ವಲ್ಪ ಕತ್ತಲೆ, 7 ಘಂಟೆಗೆ ಒಳ್ಳೆ ಬೆಳಕು, 8 ರಿಂದ 12 ಘಂಟೆಗೆ ಒಳ್ಳೆ ಬೆಳಕು ಇರುತ್ತದೆ. "ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ (ಜ್ಞಾನೋ. 4:18). ದೇವರು ನಮ್ಮನ್ನು ಆಶೀರ್ವಾದ ಮಾಡಬೇಕಾದರೆ ನಮ್ಮ ನೀತಿಯನ್ನು ನೋಡಿ ಆಶೀರ್ವಾದಿಸುತ್ತಾನೆ. ಅನೇಕ ಸಲ ನಾವು ಹೇಳುತ್ತೇವೆ. ನನ್ನ ಯಜಮಾನನಿಗೆ ಇಷ್ಟು ವರ್ಷ ನಂಬಿಗಸ್ತನಾಗಿ, ನಂಬಿಗಸ್ತಳಾಗಿ ಕೆಲಸ ಮಾಡಿದ್ದೇನೆ. ಆದರೂ ಅವರಿಗೆ ನನ್ನ ವಿಷಯದಲ್ಲಿ ತೃಪ್ತಿ ಇಲ್ಲವಲ್ಲಾ? ನನ್ನ ಮೇಲೆ ಆರೋಪ ಹೊರಿಸುತ್ತಾರಲ್ಲಾ? ನಾನು ನನ್ನ ಕಂಪೆನಿಗಾಗಿ ಇಷ್ಟು ವರ್ಷ ಕೆಲಸ ಮಾಡಿದೆ ಆದರೆ ಕಂಪನಿ ಅದನ್ನು ಪರಿಗಣಿಸಲಿಲ್ಲವಲ್ಲಾ, ನಾನು ನನ್ನ ಮಕ್ಕಳಿಗಾಗಿ ಇಷ್ಟೆಲ್ಲಾ ಮಾಡಿದೆ. ಆದರೆ ನನ್ನ ಮಕ್ಕಳು ಮರೆತು ಹೋದರಲ್ಲಾ, ನಾನು ನನ್ನ ಗಂಡನ ಜೊತೆಯಲ್ಲಿ, ಹೆಂಡತಿಯ ಜೊತೆಯಲ್ಲಿ, ನಂಬಿಗಸ್ತಳಾಗಿ, ನಂಬಿಗಸ್ತನಾಗಿ ಜೀವಿಸಿದೆ ಆದರೆ ನನ್ನ ಮೇಲೆ ಸಂಶಯಪಟ್ಟು ಆರೋಪ ಹೊರಿಸಿ ನನ್ನನ್ನು ಅವಮಾನಪಡಿಸಿ ಬಿಟ್ಟುಬಿಟ್ಟರಲ್ಲಾ, ನಾನು ನನ್ನ ಸ್ನೇಹಿತನ ಜೊತೆಯಲ್ಲಿ ನಂಬಿಗಸ್ತನಾಗಿ ನಡೆದೆ ಆದರೆ ಅವನು ನನಗೆ ದ್ರೋಹಮಾಡಿದನಲ್ಲಾ ಇಂಥ ವ್ಯಕ್ತಿಗೆ ಇಷ್ಟೆಲ್ಲಾ ಉಪಕಾರ ಮಾಡಿದ್ದೇನೆ. ಆದರೆ ನನ್ನ ಕೊರತೆಯ, ಕಷ್ಟದ ಸಮಯದಲ್ಲಿ ನನ್ನನ್ನು ಕೈಬಿಟ್ಟರಲ್ಲಾ ಎಂದು ಅನೇಕ ವಿಧವಾಗಿ ನೀನು ದು:ಖಿಸುತ್ತಿರಬಹುದು, ಸೋತುಹೋಗಬೇಡ, ನಿರಾಶನಾಗಬೇಡ ಕರ್ತನನ್ನು ದೃಷ್ಟಿಸು. ಆತನನ್ನೇ ದೃಷ್ಟಿಸಿದವರ ಮುಖ ಪ್ರಕಾಶ ಹೊಂದಿತು. ಲಜ್ಜೆಯಿಂದ ಕೆಡುವುದೇ ಇಲ್ಲ ಎಂದು ಸತ್ಯವೇದ ಹೇಳುತ್ತದೆ.

ನನ್ನ ಪ್ರಿಯ ಸಹೋದರ, ಸಹೋದರಿಯೇ ನೀನು ಈ ಲೋಕದಲ್ಲಿ ನೀತಿಯಾಗಿ ಜೀವಿಸಿ, ನೀತಿಯಾಗಿ ಎಲ್ಲಾ ವಿಷಯದಲ್ಲಿ ನಡೆದುಕೊಂಡಿರಬಹುದು. ಆದರೆ ಲೋಕ ಅದನ್ನು ಪರಿಗಣಿಸದೆ ನಿನಗೆ ದು:ಖ, ಕಷ್ಟ ಅವಮಾನ, ನಿಂದೆಕೊಟ್ಟಿರಬಹುದು. ಆದರೆ ಕರ್ತನು ನಿನ್ನ ನೀತಿಯನ್ನು ಪ್ರಕಾಶಪಡಿಸುವನು. ಕೀರ್ತ. 23:5 ವೈರಿಗಳ ಮುಂದೆ ಔತಣವನ್ನು ಸಿದ್ಧಮಾಡುವ ದೇವರು ನಮ್ಮ ದೇವರಾಗಿದ್ದಾನೆ. ನನಗೆ ಗೊತ್ತಿರುವ ಒಂದು ಕುಟುಂಬ ಕೆಲವು ವರ್ಷಗಳ ಹಿಂದೆ ಆ ಕುಟುಂಬದಿಂದ ನನಗೆ ತುಂಬಾ ನೋವು, ದು:ಖ, ವೇದನೆ ಸಿಕ್ಕಿತ್ತು. ಆದರೆ ದೇವರ ಸೇವಕನಾದ ಮೇಲೆ ಅದೇ ಕುಟುಂಬಕ್ಕೆ ಸಹಾಯಮಾಡಲು, ಪ್ರಾರ್ಥಿಸಲು ಕರ್ತನು ನನಗೆ ಸಹಾಯ ಮಾಡಿದನು. ಯಾಕಂದರೆ ಆತನು ನನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನನ್ನ ನ್ಯಾಯವನ್ನು ಮಧ್ಯಾಹ್ನದ ತೇಜಸ್ಸಿನಂತೆಯೂ ಪ್ರಕಾಶಗೊಳಿಸುವ ದೇವರಾಗಿದ್ದಾನೆ.

ಸತ್ಯವೇದದಲ್ಲಿ ಯೋಸೇಫನ ಚರಿತ್ರೆ ಎಲ್ಲರಿಗೂ ಗೊತ್ತಿದೆ. ಯೋಸೇಫನು 17 ವರ್ಷದವನಾಗಿದ್ದಾಗ ಆತನಿಗೆ ಕರ್ತನು ಕನಸಿನ ಮೂಲಕ ಆತನು ತಂದೆ, ತಾಯಿ ಅಣ್ಣಂದಿರೆಲ್ಲರೂ ನಮಸ್ಕರಿಸುವಂತಹ ಸ್ಥಾನವನ್ನು ಕೊಡುವನು ಎಂದು ವಾಗ್ದಾನ ಮಾಡಿದನು. ಅದರ ನಂತರ ಆತನ ಸ್ವತ: ಅಣ್ಣಂದಿರೇ ಯೋಸೇಫನ ಕುರಿತು ಹೊಟ್ಟೆಕಿಚ್ಚುಪಟ್ಟರು, ಆತನನ್ನು ಬಾವಿಗೆ ಹಾಕಿದರು, ಇಸ್ಮಾಯೇಲರಿಗೆ ಮಾರಿದರು. ಪೋಟಿಫರನಿಗೂ

ಆದಿಯಲ್ಲಿ ವಾಕ್ಯವಿತ್ತು ಆ ವಾಕ್ಯವು ದೇವ ಬಳಿಯಲ್ಲಿತ್ತು. ಆ ವಾಕ್ಯವು ದೇವರಾಗಿತ್ತು.
ಆ ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು (ಯೋಹಾ. 1:1–2).

ಮಾರಲ್ಪಟ್ಟನು. ಅಲ್ಲಿ ಪೋಟಿಫರನ ಪತ್ನಿ ವ್ಯಭಿಚಾರ ಪಾಪಕ್ಕೆ ಕರೆದಾಗ ಆತನು ನಿರಾಕರಿಸಿದ್ದರಿಂದ ಆತನು ಆರೋಪಿಸಲ್ಪಟ್ಟವನಾಗಿ ಸೆರೆಮನೆಗೆ ಹೋಗಬೇಕಾಯಿತು. ಸ್ವಲ್ಪ ಯೋಚಿಸಿ ಚಿಕ್ಕ ಹುಡುಗ ಯೋಸೇಫ, ಚಿಕ್ಕ ಪ್ರಾಯದಲ್ಲೇ ತಾಯಿಯನ್ನು ಕಳಕೊಂಡಿದ್ದ, ಅಣ್ಣಂದಿರ ಪ್ರೀತಿಯನ್ನು ಕಳಕೊಂಡಿದ್ದ, ತಂದೆಯ ಪ್ರೀತಿಯಿಂದ ವಂಚಿತನಾದ ವೇದನೆಗಳ ಮೇಲೆ ವೇದನೆಗೆ ತುತ್ತಾದನು. ಆದರೆ ಯೋಸೇಫನು ತನಗೆ ನೋವು ಕೊಟ್ಟಂತಹವರನ್ನು ಸೇಡು ತೀರಿಸಲು ಹುಡಕಲಿಲ್ಲ, ನೋವು ಕೊಟ್ಟ ಅಣ್ಣಂದಿರನ್ನು ಪ್ರೀತಿಸಿದ, ಪೋಷಿಸಿದ, ಸಂತೈಸಿದ ಇವೆಲ್ಲಾ ನೋಡುವಂತಹ ಕರ್ತನು ಯೋಸೇಫನಿಗೆ ಪ್ರತಿಫಲವನ್ನು ಕೊಟ್ಟು ಆಶೀರ್ವದಿಸಿದನು. ನನ್ನ ಪ್ರಿಯರೇ, ಇಂದು ನೀವು ಇದೇ ರೀತಿಯ ನೋವಿನಲ್ಲಿ ಹೋಗುವಾಗ ವ್ಯಸನಪಡದಿರಿ. ನಿಮ್ಮ ನೀತಿಯನ್ನು ನೋಡಿ ಆಶೀರ್ವದಿಸುವ ಕರ್ತನಿದ್ದಾನೆ.

ದಾವೀದನು ಕೀರ್ತ. 18:20 ರಲ್ಲಿ ಯೆಹೋವನು ನನ್ನ ನೀತಿಗೆ ಸರಿಯಾಗಿ ಮೇಲು ಮಾಡಿದನು. ನನ್ನ ಕೈಗಳ ಶುದ್ಧತ್ವಕ್ಕೆ ತಕ್ಕಂತೆ ಪ್ರತಿಫಲಕೊಟ್ಟನು. ಕರ್ತನು ನಿಮಗೆ ಪ್ರತಿಫಲ ಕೊಡುವ ದೇವರು. ಆತನು ನಿನ್ನ ಜೀವಿತದ ಪ್ರತಿಯೊಂದು ಕಾರ್ಯಗಳನ್ನು ಗಮನಿಸಿ ನಿನ್ನ ನೀತಿಯನ್ನು ಪ್ರಕಾಶಗೊಳಿಸುವಾತನಾಗಿದ್ದಾನೆ. ಮಾತ್ರವಲ್ಲದೆ ನಿನ್ನ ನ್ಯಾಯವನ್ನು ಮಧ್ಯಾಹ್ನದ ತೇಜಸ್ಸಿನಂತೆ ಪ್ರಕಾಶಗೊಳಿಸುವಾತನಾಗಿದ್ದಾನೆ. ನಾವು ಸೇವೆಯನ್ನು ಆರಂಭಿಸಿದಾಗ, ಅನೇಕ ಆರ್ಥಿಕ ಕಷ್ಟಗಳಿದ್ದವು. ನನ್ನ ತಂದೆಕೊಡುವ ಕಿರುಕುಳ ಇನ್ನೊಂದು ಬದಿಯಲ್ಲಿತ್ತು. ಸೇವೆ ಆರಂಭಿಸಿದ ಮೇಲೆ ಅನೇಕರು ಸೇವೆ ಮೇಲೆ ಬರಬಾರದೆಂದು ಹೊಟ್ಟೆಕಿಚ್ಚಿನಿಂದ, ಪಂಚಾಯತೆಗೆ, ಪೋಲಿಸ್‌ಗೆ ದೂರು ಕೊಡಲಾರಂಭಿಸಿದರು. ಅನೇಕ ಸಹಿಗಳನ್ನು ಸಂಗ್ರಹಿಸಿ, ಕಟ್ಟಡಗಳು ಮೇಲೆ ಬರಬಾರದು, ಆಶ್ರಮಸೇವೆ ನಡೆಸಬಾರದು, ಸಭಾ ಸೇವೆ ಮುಂದುವರಿಸಬಾರದು ಹೀಗೆ ಅನೇಕ ವಿಧವಾಗಿ ಹೋರಾಡಿದರು. ಆದರೆ ದೇವರಿಗೆ ಸ್ತೋತ್ರ. ದೇವರ ವಾಕ್ಯ ಹೇಳುತ್ತದೆ, ನಿನಗೆ ವಿರುದ್ಧವಾಗಿ ಕಲ್ಪಿಸಿದ ಯಾವುದೇ ಆಯುಧ ಫಲಿಸುವುದಿಲ್ಲ (ಯೆಶಾ. 54 :17). ನಿನ್ನ ಮೇಲೆ ಕಿಡಿಕಿಡಿಯಾದವರು ಆಶಾಭಂಗಪಟ್ಟು ಅವಮಾನ ಹೊಂದುವರು. ನಿನ್ನ ಸಂಗಡ ವ್ಯಾಜ್ಯವಾಡಿದವರು ನಾಶವಾಗಿ ಇಲ್ಲದೇ ಹೋಗುವರು. ನಿನ್ನೊಡನೆ ಹೋರಾಡಿದವರನ್ನು ಹುಡುಕಿದರೂ ಅವರು ನಿನಗೆ ಕಾಣಿಸರು. ನಿನಗೆ ವಿರುದ್ಧವಾಗಿ ಯುದ್ಧಮಾಡಿದವರು ಇಲ್ಲದೇ ಹೋಗಿ ನಿರ್ನಾಮವಾಗುವರು.

ಈ ಮೇಲಿನ ವಚನ ಪ್ರಕಾರ ಯಾರೆಲ್ಲಾ ನಮ್ಮೊಂದಿಗೆ ಹೋರಾಡಿದರೋ ಅವರು ಕ್ಷಿಣಿಸಿಹೋಗುವಂತೆಯೂ ನಾವು ಅವರ ಕಣ್ಣಮುಂದೆ ಅಭಿವೃದ್ಧಿ ಹೊಂದುವಂತೆಯೂ ಕರ್ತನು ಕಾರ್ಯಮಾಡಿದನು. ಅನೇಕರು ನಾವು ನಾಶವಾಗಬೇಕು, ನಮ್ಮ ಸೇವೆ ಮೇಲೆ ಬರಬಾರದು, ನಮ್ಮ ಸೇವೆ ಬಿದ್ದು ಹೋಗಬೇಕು ಎಂದು ಮಾಟಮಂತ್ರಗಳನ್ನು ಮಾಡಿದರೂ ನಮಗೆ ನಮ್ಮ ಸ್ಥಳದಲ್ಲಿ ಮಂತ್ರಿಸಿದ ಕುಂಬಳಕಾಯಿ, ತೆಂಗಿನಕಾಯಿ, ಕುಂಕುಮ ಮತ್ತು ಡಬ್ಬಿಪಟ್ಟಿಯೊಳಗೆ ತಗಡುಗಳು, ಚಿಕ್ಕ ಕಲ್ಲುಗಳು ಸಿಕ್ಕಿವೆ. ಇದೇ ಕೈಗಳಿಂದ ಅವೆಲ್ಲವನ್ನು ಮುಟ್ಟಿ ನಾಶಪಡಿಸಿದ್ದೇನೆ. ಆ ಮಂತ್ರ ಶಕ್ತಿಗಳು ನಮಗೆ ಯಾವುದೇ ಹಾನಿ ಮಾಡಲು ಸಾಧ್ಯವಾಗಲಿಲ್ಲ. ಲೂಕ. 10:19, ಕೀರ್ತ. 91:13, 1 ಯೋಹಾ. 4:4ರ ಪ್ರಕಾರ ವೈರಿಯ ಸಮಸ್ತ ಬಲದ ಮೇಲೆ ಕರ್ತನು ಅಧಿಕಾರ ಕೊಟ್ಟಿದ್ದಾನೆ. ಯಾವುದು ಯಾವುದೇ ಕೇಡು ಮಾಡಲು ಸಾಧ್ಯವಿಲ್ಲ. ಯಾವಾಗಲೆಲ್ಲಾ ಮಂತ್ರ ಮಾಡಿದ ತಗಡಿನ ಶೀಟು, ಡಬ್ಬಿಗಳು ಸಿಗಲು ಆರಂಭವಾಯಿತೋ ನಮ್ಮ ಸೇವೆ ಬೆಳೆಯಲು ಆರಂಭವಾಯಿತು. ಯಾಕೆಂದರೆ ನನ್ನೊಳಗೆ ಇರುವಂತ ಕರ್ತನಾದ ಯೇಸುವನ್ನು ನಾನು ತಿಳಿದಿದ್ದೇನೆ ಆತನು ಸರ್ವಶಕ್ತನಾಗಿದ್ದಾನೆ.

ನ್ಯಾಯತೀರ್ಪು ನೀತಿಗೆ ತಿರುಗಿಕೊಳ್ಳುವುದು ಯಥಾರ್ಥಚಿತ್ತರೆಲ್ಲರೂ ಅದನ್ನೇ ಅನುಸರಿಸುವರು (ಕೀರ್ತ. 94:15). ನನ್ನ ಪ್ರಿಯ ಸಹೋದರನೇ, ಸಹೋದರಿಯೇ ಯಾರೆಲ್ಲಾ ನಿನ್ನನ್ನು ಅವಮಾನಪಡಿಸುತ್ತಾರೋ, ನಿಂದಿಸುತ್ತಾರೋ, ದು:ಖಪಡಿಸುತ್ತಾರೋ ಅವರ ಮುಂದೆಯೇ ನಿನ್ನ ತಲೆ ಎತ್ತಿ ನಿಲ್ಲುವಂತೆ ಕರ್ತನು ನಿನಗೆ ಕೃಪೆಕೊಡುವನು. ಇದು ಕರ್ತನ ನೀತಿಯಾಗಿದೆ.

ನೀವು ಅನೇಕ ಜನರಿಗೆ ಸಾಲಕೊಡುವಿರೇ ಹೊರತು ಸಾಲ ತೆಗೆದುಕೊಳ್ಳುವುದಿಲ್ಲ. ನಾನು ಈಗ ನಿಮಗೆ ಬೋಧಿಸುವ ಮಾತುಗಳನ್ನು ಬಿಟ್ಟು ಎಡ ಬಲಕ್ಕೆ ನೀವು ತೊಲಗದೆ, ಬೇರೆ ದೇವರುಗಳನ್ನು ಅವಲಂಬಿಸದೆ ನಿಮ್ಮ ದೇವರಾದ ಯೆಹೋವನ ಆಜ್ಞೆಗಳಲ್ಲೇ ಲಕ್ಷ್ಯವಿಟ್ಟು ಅವುಗಳನ್ನೇ ಅನುಸರಿಸಿ ನಡೆದರೆ ಆತನು ಇತರರಿಗೆ ನಿಮ್ಮನ್ನು ಅಧೀನಮಾಡದೆ ಎಲ್ಲರಿಗೂ ಶಿರಸ್ಸನ್ನಾಗಿಯೇ ಮಾಡುವನು. ನೀವು ಎಲ್ಲರಿಗಿಂತಲೂ ಮೇಲಣರಾಗಿರುವಿರೇ ಹೊರತು ಕೆಳಗಣರಾಗಿರುವುದಿಲ್ಲ.

ಮುಂದುವರಿಯುವದು.........

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ. ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು (ಜ್ಞಾನೋ. 8:17).

# ಯೌವನಸ್ಥರ ಸ್ವರ

# ಪವಿತ್ರಾತ್ಮನೊಂದಿಗೆ ನಡೆ

***ಕಳೆದ ಸಂಚಿಕೆಯಿಂದ ...***

ಸಾಮಾನ್ಯವಾಗಿ ಒಂದು ಕನ್ಯೆ ಗರ್ಭಧರಿಸುವಾಗ ಆಕೆ ತನ್ನ ಕನ್ಯಾವಸ್ಥೆಯ ಸೌಂದರ್ಯವನ್ನು ಕಳೆದುಕೊಳ್ಳುತ್ತಾಳೆ ಮತ್ತು ಆಕೆಯ ದೇಹದಲ್ಲಿ ಬಹಳಷ್ಟು ಬದಲಾವಣೆಗಳು ಆಗಲು ಪ್ರಾರಂಭವಾಗುತ್ತದೆ. ಆಕೆಯು ಇತರರಿಗಿಂತ ವಿಭಿನ್ನವಾಗುತ್ತಾಳೆ ಹಾಗೂ ನಿರಂತರ ಬದಲಾವಣೆಯ ಪ್ರಕ್ರಿಯೆಯಲ್ಲಿರುತ್ತಾಳೆ. ಆಕೆ ಮೊದಲಿದ್ದ ಹಾಗೆ ಇರಲು ಸಾಧ್ಯವಾಗುವುದಿಲ್ಲ, ಹಾಗೆ ಇರಲು ಬಯಸಿದರೂ ಆಕೆಯ ದೇಹ ಒಪ್ಪುವುದಿಲ್ಲ. ಇಂದು ನೀನು ನಿನ್ನ ಜೀವಿತದಲ್ಲಿ ಯೇಸುವನ್ನು ನೀನು ಗರ್ಭಧರಿಸಬೇಕೆಂದಿದ್ದರೆ ಪವಿತ್ರಾತ್ಮನನ್ನು ನೀನು ಅಂಗೀಕರಿಸು. ಪವಿತ್ರಾತ್ಮನನ್ನು ಅಂಗೀಕರಿಸುವುದಾದರೆ, ಆತನು ನಿನ್ನ ಜೀವಿತದಲ್ಲಿ ಮಾಡಲು ಬಯಸುವ ಎಲ್ಲಾ ಬದಲಾವಣೆಗಳಿಗೂ ಸಿದ್ದನಿರಬೇಕು/ಸಿದ್ದಳಿರಬೇಕು. ನೀನು ಇತರರಿಗೆ ನಿನ್ನನ್ನು ಹೋಲಿಸದೇ ವಿಭಿನ್ನವಾಗಿರಬೇಕು. ಪವಿತ್ರಾತ್ಮನು ನಿನ್ನ ಜೀವಿತದಲ್ಲಿ ಮಾಡುವ ಕಾರ್ಯಗಳಿಗೆ ನೀನು ಪ್ರತಿಸ್ಪಂದಿಸುತ್ತಾ ನಿರಂತರ ಬದಲಾವಣೆಯಲ್ಲಿ ಮುಂದೆ ಸಾಗಬೇಕು. ಅದು ನೀನು ಬಯಸಿದ ಹಾಗಿರದೇ ಆತನು ಬಯಸುವಂತಿರಬೇಕು. ಒಮ್ಮೆ ಯೇಸು ನಿನ್ನ ಜೀವಿತದಲ್ಲಿ ಬಂದ ಕ್ಷಣದಿಂದ ಇಡೀ ಚಿತ್ರಣವೇ ಬದಲಾಗಲಿಕ್ಕಿದೆ.

ಯಾಕೆಂದರೆ ಆತನು ಪರಾತ್ಪರನ ದೇವರ ಮಗನು, ಸ್ವತ: ದೇವರೇ ಮನುಷ್ಯರೂಪದಲ್ಲಿ ಬಂದಾತನಾಗಿದ್ದಾನೆ. ಮತ್ತೊಂದು ಕಡೆ, ಮತ್ತಾಯ 1:19ರಿಂದ ನೋಡುವಾಗ, ಆದರೆ ಆಕೆಯ ಗಂಡನಾದ ಯೋಸೇಫನು ಸಜ್ಜನನಾಗಿದ್ದು ಆಕೆಯನ್ನು ಬೈಲಿಗೆ ತರುವದಕ್ಕೆ ಮನಸ್ಸಿಲ್ಲದೆ, ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟುಬಿಡಬೇಕೆಂದಿದ್ದನು. ಯೋಸೇಫನು ಇದನ್ನು ಆಲೋಚಿಸುತ್ತಿರುವಾಗ ಕರ್ತನ ದೂತನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು– ಎಲೈ ಯೋಸೇಫನೇ, ದಾವೀದನ ವಂಶದವನೇ ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು ಪವಿತ್ರಾತ್ಮನಿಂದಲೇ ಆದದ್ದು ಎಂಬ ಮಾತನ್ನು ಕೇಳಿದನು. ವಚನ 24, ಆಗ ಯೋಸೇಫನು ನಿದ್ದೆಯಿಂದ ತಿಳಿದೆದ್ದು ಕರ್ತನ ದೂತನು ಅಪ್ಪಣೆಕೊಟ್ಟ ಹಾಗೆ ತನ್ನ ಹೆಂಡತಿಯನ್ನು ಸೇರಿಸಿಕೊಂಡನು. ಇಂದು ಅನೇಕರು ತಮ್ಮ ಜೀವಿತದಲ್ಲಿ, ಕುಟುಂಬದಲ್ಲಿ ಯೋಸೇಫನ ಹಾಗೆ ಕರ್ತನು ಮಾಡುವ ಕಾರ್ಯಗಳ ಮೇಲೆ ಮನಸ್ಸಿಡದೆ, ತಮಗೆ ಸರಿತೋಚುವುದನ್ನು ಮಾಡಲು ಮುಂದಾಗುವವರಾಗಿದ್ದಾರೆ. ಆದರೆ ಪವಿತ್ರಾತ್ಮನು ಮರಿಯಳ ಮೇಲೆ ಇಳಿದುಬಂದುದರ ಸಾಕ್ಷಿಯಾಗಿ ಮತ್ತು ಮಾದರಿಯುಳ್ಳ ಕುಟುಂಬವಾಗಿ ಕರ್ತನು ತೋರಿಸಲು ಉದ್ದೇಶಿಸಿದ್ದರಿಂದ ಮರಿಯಳನ್ನು ಸಂಧಿಸಿದ ದೂತನನ್ನೇ ಯೋಸೇಫನನ್ನು ಸಂಧಿಸಲು ಕಳುಹಿಸಿದನು. ಇಂದು ನಿಮ್ಮ ಜೀವಿತದಲ್ಲಿ, ಕುಟುಂಬದಲ್ಲಿ ಪವಿತ್ರಾತ್ಮನು ಕಾರ್ಯ ಮಾಡುತ್ತಿದ್ದನೆಂದು ರುಜುಪಡಿಸಲು ಅನೇಕರಿಗೆ ದೇವದೂತರ ಸಂದರ್ಶನವಾಗಲಿಕ್ಕಿದೆ. ಒಂದು ವೇಳೆ ಆ ವ್ಯಕ್ತಿಯು ನೀವೇ ಆಗಿದ್ದಲ್ಲೀ ನೀವಿರುವ ಸ್ಥಳದಲ್ಲೇ ನಿಮ್ಮನ್ನು ದೇವರ ಕರಗಳಲ್ಲಿ ಒಪ್ಪಿಸಿಕೊಡಿ. ಕುಟುಂಬವಾಗಿ ಕರ್ತನು ನಿಮ್ಮನ್ನು ಮಾನಿಸುವನು. ನಾವು ಯೋಹಾ 20:22ರಲ್ಲಿ – ಯೇಸು ತನ್ನ ಶಿಷ್ಯರ ಮೇಲೆ ಊದಿ ಅವರಿಗೆ – ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ ಅಂದನು. ಅಂದರೆ ಯೇಸು ತಾನು ಹೋಗುವ ಮೊದಲೇ ಪವಿತ್ರಾತ್ಮನನ್ನು ಅಂಗೀಕರಿಸುವದರ ಬಗ್ಗೆ ತನ್ನ ಶಿಷ್ಯರಿಗೆ ತಿಳಿಸಿದ್ದನು. ಇಂದು ಪವಿತ್ರಾತ್ಮನ ಬಗ್ಗೆ ತಾತ್ಸಾರ ಮನೋಭಾವನೆ ನಿನ್ನಲ್ಲಿದ್ದರೆ, ಇಂದೇ ಅದಕ್ಕಾಗಿ ಪಶ್ಚಾತಾಪಪಟ್ಟು ಪವಿತ್ರಾತ್ಮನನ್ನು ಅಂಗೀಕರಿಸು. ನೀನು ಇಂದಿನಿಂದ ಪವಿತ್ರಾತ್ಮನೊಂದಿಗೆ ನಡೆಯಲು ಸಿದ್ದನಾಗುವಿ. ಪವಿತ್ರಾತ್ಮನೇ ಸ್ವತ: ನಿನ್ನ ಕೈಗಳನ್ನು ಹಿಡಿದು ನಿನ್ನನ್ನು ನಡೆಸುವನು. ಈ ಸಂಚಿಕೆ ನಿಮ್ಮನ್ನು ಪವಿತ್ರಾತ್ಮನೊಂದಿಗೆ ನಡೆಯಲು ಸಹಾಯ ಮಾಡಿದೆಯೆಂದು ನಾನು ಬಲವಾಗಿ ನಂಬುತ್ತೇನೆ. ಇನ್ನು ಮುಂದಿನ ಸಂಚಿಕೆಗಳಲ್ಲಿ ಬಹಳಷ್ಟನ್ನು ಪವಿತ್ರಾತ್ಮನ ಸಹಾಯದೊಂದಿಗೆ ಕಲಿಯೋಣ. ದಯವಿಟ್ಟು ನನಗಾಗಿ, ನನ್ನ ಕುಟುಂಬಕ್ಕಾಗಿ ಮತ್ತು ಸೇವೆಗಾಗಿ ನಿಮ್ಮ ಪ್ರಾರ್ಥನೆಯಲ್ಲಿ ಕರ್ತನ ಬಳಿ ಪ್ರಾರ್ಥಿಸಿರಿ. ನಿಮ್ಮ ಸಲಹೆಗಳನ್ನು ಮತ್ತು ಕರ್ತನು ನಿಮ್ಮೊಂದಿಗೆ ಮಾತನಾಡಿ ರುವುದನನ್ನು ತಪ್ಪದೇ ನನಗೆ ಬರೆದು ಕಳುಹಿಸಿ.

ನನ್ನ ಇ–ಮೇಲ್: jsma2j@gmail.com.

ಕರ್ತನು ನಿಮ್ಮನ್ನು ಆಶೀರ್ವದಿಸಲಿ.

ಕರ್ತನಾದ ಯೇಸುಕ್ರಿಸ್ತನಲ್ಲಿ ನಿಮ್ಮವ

**ಸಭಾ॥ ಜಾನ್ ಸ್ಟೀಫನ್ ಮೊಂತೆರೋ**

ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು ಆತನಿಗೆ ಯೋಗ್ಯರಾಗಿ ನಡೆದು ಎಲ್ಲಾ ವಿಧದಲ್ಲ ಆತನನ್ನು ಸಂತೋಷಪಡಿಸಿರಿ (ಕೊಲೊ. 1:10).

# ಸ್ಥಳೀಯ ಮತ್ತು ವಿದೇಶ ಸುದ್ಧಿ

* ರೂಪಾಯಿ ಕುಸಿತ, ಕರಡಿ ಕುಣಿತ : ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿಯ ಚಾರಿತ್ರಿಕ ಮಧ್ಯಂತರ ಕುಸಿತದ ಪರಿಣಾಮ ಮುಂಬಯಿ ಷೇರು ಮಾರುಕಟ್ಟೆ ರಕ್ತದೋಕುಳಿಗೆ ಸಾಕ್ಷಿಯಾಯಿತು.

* ಶಿಷ್ಯವೇತನ ಪಡೆಯಲು ಆಧಾರ್ ಕಾರ್ಡ್ ಕಡ್ಡಾಯಗೊಳಿಸಿ ಸಮಾಜ ಕಲ್ಯಾಣ ಇಲಾಖೆ ಆದೇಶ ಹೊರಡಿಸಿರುವ ಹಿನ್ನಲೆಯಲ್ಲಿ ರಾಜ್ಯದ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳು ಪಡೆಯುತ್ತಿದ್ದ ಅಲ್ಪಸ್ವಲ್ಪ ನೆರವಿಗೆ ಸಂಚಕಾರ ಬಂದಿದೆ.

* ಮುಂಬೈ ಡಾಕ್‌ಯಾರ್ಡ್‌ನಲ್ಲಿದ್ದ 'ಐಎನ್‌ಎಸ್ ಸಿಂಧುರಕ್ಷಕ' ಸಬ್ ಮೆರಿನ್‌ನಲ್ಲಿ ಸರಣಿ ಸ್ಫೋಟ ಸಂಭವಿಸಿದೆ. ಅದರ ಪರಿಣಾಮವಾಗಿ ಭಾರಿ ಪ್ರಮಾಣದಲ್ಲಿ ಬೆಂಕಿ ಹತ್ತಿಕೊಂಡಿತ್ತು. ಈ ದುರಂತದಿಂದಾಗಿ ಮೂವರು ಅಧಿಕಾರಿಗಳು ಸೇರಿದಂತೆ ಅದರಲ್ಲಿದ್ದ 18 ಮಂದಿ ಸಿಬ್ಬಂದಿ ನಾಪತ್ತೆಯಾಗಿದ್ದಾರೆ. ಇದುವರೆಗೆ ಅವರ ಸುಳಿವು ಪತ್ತೆಯಾಗಿಲ್ಲ. ಸ್ಫೋಟ ಸಂಭವಿಸಿದ ಬಳಿಕ ಸಬ್‌ಮೆರಿನ್ ಆಂಶಿಕವಾಗಿ ಮುಳುಗಿದೆ.

* ರಾಜ್ಯದಲ್ಲಿ ಈ ಬಾರಿಯ ಮುಂಗಾರು ಕಳೆದ 6 ವರ್ಷಗಳಲ್ಲೇ ಅತ್ಯಧಿಕ ಮಳೆಯನ್ನು ಸುರಿಸಿದೆ. ಅಷ್ಟೇಅಲ್ಲ, ಮಲೆನಾಡು ಭಾಗದಲ್ಲಿ ಕಳೆದ 42 ವರ್ಷಗಳ ಬಳಿಕ ಹಾಗೂ ಕರಾವಳಿಯಲ್ಲಿ 12 ವರ್ಷಗಳ ಅನಂತರ ದಾಖಲೆಯ ಮಳೆಯಾಗಿದೆ.

* ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಅನಧಿಕೃತ ಆಸ್ತಿಗಳ ನೋಂದಣೀ ನಿಯಂತ್ರಿಸಲು ಸರ್ಕಾರ ಜಾರಿಗೆ ತಂದ 'ಇ-ಸುತ್ತು' ಸಾಫ್ಟ್‌ವೇರ್ ಕಾರ್ಯಕ್ರಮ ಭೂಮಾಲೀಕರಿಗೆ ಸುಸ್ತು ಹೊಡೆಸುತ್ತಿದೆ. ಭೂಮಾಲೀಕರು ತಮ್ಮ ಜಮೀನು ಮಾರಾಟ ನೋಂದಣಿ ಮಾಡಬೇಕಾದರೆ ಫಾರ್ಮ್ ನಂ.9 ಮತ್ತು 11ನ್ನು ಸಬ್ ರಿಜಿಸ್ಟ್ರಾರ್ ಕಚೇರಿಗೆ ಸಲ್ಲಿಸಬೇಕು.

* ಉತ್ತರಾಖಂಡ ಪ್ರವಾಹ ಪರಿಸ್ಥಿತಿಯಲ್ಲಿ ಸಿಲುಕಿ ನೊಂದಿರುವ ರಾಜ್ಯದ ಯಾತ್ರಿಕರನ್ನು ರಕ್ಷಿಸಿ ಸುರಕ್ಷಿತವಾಗಿ ಕರೆತರುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಲಿದ್ದು, ಯಾರೊಬ್ಬರೂ ಆತಂಕಕ್ಕೆ ಒಳಗಾಗುವುದು ಬೇಡ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅಭಯ ನೀಡಿದ್ದಾರೆ.

* ಸಂತ್ರಸ್ತರು ಆಹಾರಕ್ಕೆ ಪರದಾಡಬೇಕಾಗಿದ್ದು ಒಂದು ಬೌಲ್ ಅನ್ನಕ್ಕೆ 500 ರೂ., ರೊಟ್ಟಿಗೆ 250 ರೂ., ನೀರಿಗೆ 200ರೂ., ಚಿಪ್ಸ್ ಮತ್ತಿತರ ವಸ್ತುಗಳಿಗೆ 100 ರೂ. ನೀಡಬೇಕಾದ ಪರಿಸ್ಥಿತಿ ಇದೆ. ಟ್ಯಾಕ್ಸಿ ಚಾಲಕರು ಸಾವಿರೂ. ಬಾಡಿಗೆ ವಸೂಲಿ ಮಾಡುವಲ್ಲಿ 4 ಸಾವಿರ ರೂ. ವಸೂಲಿ ಮಾಡುತ್ತಿದ್ದಾರೆ. ದುರಂತಕ್ಕೀಡಾದವರ ಬಗ್ಗೆ ಸ್ವಲ್ಪವೂ ಕರುಣೆ ಇಲ್ಲದವರಂತೆ ಸ್ಥಳೀಯರು ಕೆಲವರು ಸುಲಿಗೆಗೆ ಇಳಿದಿದ್ದಾರೆ ಎಂದು ಅನೇಕ ಯಾತ್ರಿಕರು ಆರೋಪಿಸಿದ್ದಾರೆ.

* ಈರುಳ್ಳಿ ಬೆಲೆ ಗಗನಕ್ಕೆ : ರಫ್ತು ದರ ಹೆಚ್ಚಳ :– ಸಗಟು ಮಾರುಕಟ್ಟೆಗೆ ಈರುಳ್ಳಿ ಪೂರೈಕೆ ಕಡಿಮೆಯಾಗಿರುವುದರಿಂದ ದೇಶದ ಬಹುತೇಕ ಚಿಲ್ಲರೆ ಮಾರುಕಟ್ಟೆಗಳಲ್ಲಿ ಈರುಳ್ಳಿ ಧಾರಣೆ ಕೆ.ಜಿಗೆ 80 ಗಡಿ ಸಮೀಪಕ್ಕೆ ಬಂದಿದೆ.

* ಪಾನ್ ಕಾರ್ಡ್ ಮೇಲೆ ತಾಯಿಯ ಹೆಸರನ್ನೂ ಮುದ್ರಿಸುವ ಕುರಿತು ತನ್ನ ನಿಲುವು ಸ್ಪಷ್ಟಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ತಿಳಿಸಿದೆ. ಪಾನ್ ಕಾರ್ಡ್ ಮೇಲೆ ತಂದೆಯ ಅಥವಾ ತಾಯಿಯ ಹೆಸರು ಮುದ್ರಿಸಲು ಅರ್ಜಿದಾರರಿಗೆ ಆಯ್ಕೆ ನೀಡುವ ಕುರಿತು ವಿವಿಧ ಇಲಾಖೆಗಳೊಂದಿಗೆ ಪರಾಮರ್ಶಿಸಿದ ನಂತರ ತನ್ನ ನಿರ್ಧಾರವನ್ನು ನವೆಂಬರ್ 1 ರೊಳಗೆ ತಿಳಿಸುವಂತೆ ನ್ಯಾ. ಸಂಜೀವ್ ಖನ್ನಾ ಹಾಗೂ ವಿ.ಪಿ ವೈಷ್ ಅವರಿದ್ದ ಪೀಠ ಸೂಚನೆ ನೀಡಿದೆ.

* ಗುವಾಂಗ್‌ಜೂ (ಚೀನ) ಥಾಯ್ಲೆಂಡಿನ ಹದಿಹರೆಯದ ಆಟಗಾರ್ತಿ ರಚನೊಕ್ ಇಂತನಾನ್ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ವನಿತಾ ವಿಭಾಗದ ಪ್ರಶಸ್ತಿ ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.

ಇನ್ನೂ ಏಕೆ ಇಳಿದಿಲ್ಲ ಅಕ್ಕಿ ಬೆಲೆ? ಜೀವನಾವಶ್ಯಕ ಆಹಾರ ವಸ್ತುಗಳ ಪೈಕಿ ಅಕ್ಕಿಯ ಸಗಟು ಮಾರಾಟ ದರ ಕಿಲೋ ಒಂದರ 6–10 ರೂ.ಗಳಷ್ಟು ಇಳಿಕೆಯಾಗಿದೆ. ಆದರೆ, ಚಿಲ್ಲರೆ ಮಾರಾಟ ದರ ಯಾವಾಗ ಇಳಿಕೆಯಾಗಲಿದೆ ಎಂಬ ನಿರೀಕ್ಷೆಯಲ್ಲಿದ್ದಾರೆ ಜನಸಾಮಾನ್ಯರು.

ನನ್ನ ಕರ್ತನಾದ ಕ್ರಿಸ್ತಯೇಸುವನ್ನರಿಯುವದೇ ಅತಿ ಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನೂ ನಷ್ಟವೆಂದೆಣಿಸುತ್ತೇನೆ (ಫಿಲಿ. 3:8).

# ಹರ್ಷ ಧ್ವನಿಯು ಕೇಳಿಸುವದು

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**ಆತನ ಕೋಪವು ಕ್ಷಣಮಾತ್ರವೇ; ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವದು; ಸಂಜೆಗೆ ದು:ಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು** (ಕೀರ್ತ. 30:5).

ಪ್ರಿಯರೇ, ಕಷ್ಟದಲ್ಲಿ, ಬಡತನದಲ್ಲಿ, ಸೋಲುವಿಕೆಯಲ್ಲಿ ಒಡೆದುಹೋದ ಸ್ಥಿತಿಯಲ್ಲಿ ಜೀವಿಸುತ್ತಿದ್ದೇನೆ ಎಂದು ನೀವು ಹೇಳುತ್ತಿರಬಹುದು ಆದರೆ ದೇವರ ಕಡೆಗೆ ನೋಡುವುದಾದರೆ ನಿಮ್ಮ ಸ್ಥಿತಿಯು ಬದಲಾಗುತ್ತದೆ. ನೀವು ಜೀವಿತದ ಯಾವುದಾದರೂ ಒಂದು ಸಂದರ್ಭದಲ್ಲಿ ಸೋಲನ್ನು ಅನುಭವಿಸಿದ ವ್ಯಕ್ತಿಯಾಗಿರಬಹುದು ಒಂದು ವೇಳೆ ವಿದ್ಯಾಭ್ಯಾಸ ಪೂರ್ತಿಕರಿಸಲಿಕ್ಕೆ ಆಗದೆ ಇರಬಹುದು, ಒಂದು ಒಳ್ಳೆ ಕೆಲಸಕ್ಕೆ ಅರ್ಜಿ ಹಾಕಿದರೂ ಕೆಲಸ ಸಿಗದೆ ಇರಬಹುದು ಅಥವಾ ಜೀವಿತದ ಯಾವುದೇ ಭಾಗದಲ್ಲಿ ಏಳಿಗೆ ಹೊಂದದೆ ಸೋಲಿನ ನಿರಾಶೆಯ ಅನುಭವ ನಿನಗಿರಬಹುದು, ಜೀವಿತವು ಬಲಹೀನವಾಗುವಾಗ ಜೀವಿಸಲಿರುವ ಆಸೆಯು ನಷ್ಟವಾಗುವಾಗ ನಮ್ಮ ಜೀವಿತವನ್ನು ಕೊಣೆಗಾಣಿಸಲಿಕ್ಕೆ ನೋಡುತ್ತೇವೆ. ನಮ್ಮನ್ನು ಪ್ರೀತಿಸುವ ದೇವರು ಜೀವಿತದಲ್ಲಿ ಎದುರಿಸುವ ಎಲ್ಲಾ ಸಮಸ್ಯೆಗಳಿಗಿಂತಲೂ ದೊಡ್ಡವನಾಗಿದ್ದಾನೆ. ದೇವರಿಗೆ ತಿಳಿದೇ ಅನೇಕ ಸಾರಿ ನಮ್ಮ ಜೀವಿತದಲ್ಲಿ ಸೋಲುಗಳು ಸಂಭವಿಸುತ್ತದೆ. ಸೋಲಿನ ಮೂಲಕವಾದರೂ ನಾವು ದೇವರ ಪ್ರೀತಿಯನ್ನು ತಿಳಿದುಕೊಳ್ಳಲಿ ಎಂದು ದೇವರು ಬಯಸುತ್ತಿರಬಹುದು. ಒಂದು ವೇಳೆ ರೋಗದ ಪರಿಸ್ಥಿತಿ ನಿನ್ನದಾಗಿದ್ದರೆ ಅದರ ಉದ್ದೇಶ ರೋಗದ ಹಾಸಿಗೆಯಲ್ಲಿ ದೇವರ ಸಂಗಡ ಸಂಬಂಧವನ್ನು ಹೊಂದಿಕೊಳ್ಳಲು ಸಂದರ್ಭ ದೊರೆಯುತ್ತದೆ. ನಾವು ತಪ್ಪಿ ಹೋಗುವ ಕುರಿಗಳ ಹಾಗಿದ್ದೇವೆ. ನೋಡಿದರೂ ಕೇಳಿದರೂ ತಿಳಿದುಕೊಳ್ಳಲಿರುವ ಸಾಮರ್ಥ್ಯ ನಮಗೆ ಇಲ್ಲದಾಗುತ್ತದೆ.

ಪ್ರಿಯರೇ, ನಿಮ್ಮ ಜೀವಿತದ ಸೋಲುಗಳು ದೇವರ ಸಹಾಯವಿಲ್ಲದೆ ನಿಮಗೆ ಏನು ಮಾಡಲು ಸಾಧ್ಯವಿಲ್ಲ ಎಂಬುದನ್ನು ನಿಮಗೆ ಕಲಿಸಬೇಕು. ಅದನ್ನು ಕಲಿಯಲು ತಡವಾಗುವದರಿಂದ ಇವುಗಳು ಸಂಭವಿಸುತ್ತವೆ. ಸೋಲುಗಳು ಎಂದಿಗೂ ನಿಮ್ಮ ಜೀವಿತದ ಕೊನೆಯಲ್ಲ. ಸೋಲುಗಳೂ ಜೀವಿತದಲ್ಲಿ ದೊಡ್ಡ ಕಾರ್ಯಗಳನ್ನು ಹೊಂದಿಕೊಳ್ಳಲಿರುವ ಮೆಟ್ಟಿಲುಗಳಾಗಿ ಮಾರ್ಪಡಬಹುದು. ಈ ಕಾರಣದಿಂದ ನಿಮ್ಮ ಜೀವಿತದಲ್ಲಿ ಸೋಲುಗಳು ಸಂಭವಿಸುವಾಗ ಯಾಕೆ ಇನ್ನು ಬದುಕಿದ್ದೇನೆ ಇನ್ನು ಸತ್ತರೆ ಚೆನ್ನಾಗಿತ್ತು ಎಂದು ಆಲೋಚಿಸಬಾರದು.

ಒಬ್ಬ ಕ್ರಿಡಾಪಟುವನ್ನು ನೋಡಿ ಆಟೋಟದಲ್ಲಿ ಸೋತ ಕೂಡಲೇ ಅಲ್ಲಿಯೇ ನಿಲ್ಲಿಸುವುದಿಲ್ಲ. ಪುನ: ಪುನ: ಪ್ರಯತ್ನಿಸುತ್ತಾನೆ. ವ್ಯಾಪರಸ್ಥನ ವ್ಯಾಪಾರ ಕ್ಷೀಣಿಸಿದ ಕೂಡಲೆ ಅದನ್ನು ಬಿಟ್ಟು ಹೋಗುವುದಿಲ್ಲ. ವೈದ್ಯರು ಚಿಕಿತ್ಸೆ ಕೊಟ್ಟ ಒಬ್ಬ ರೋಗಿ ಸತ್ತರೆ ಅವರು ಚಿಕಿತ್ಸೆ ನಿಲ್ಲಿಸುವುದಿಲ್ಲ. ವ್ಯವಸಾಯಗಾರನು ತನ್ನ ಬೆಳೆ ನಷ್ಟವಾದರೆ ಇನ್ನುಮುಂದೆ ನನಗೆ ವ್ಯವಸಾಯ ಬೇಡ ಎಂದ ಹೇಳಿ ಊರು ಬಿಟ್ಟು ಹೋಗುವುದಿಲ್ಲ. ಮುಂದಿನ ವರ್ಷ ಮತ್ತೇ ಪ್ರಯತ್ನಿಸುತ್ತಾನೆ.

ಕರ್ತನಲ್ಲಿ ಪ್ರಿಯರೇ, ದೇವರು ನಮ್ಮನ್ನು ಸಮಯಕ್ಕಾಗಿ ಸೃಷ್ಟಿಸಲಿಲ್ಲ. ನಿತ್ಯತೆಗಾಗಿ ಸೃಷ್ಟಿಸಿದ್ದಾನೆ. ಎಂದೆಂದಿಗೂ ನಾವು ಕರ್ತನ ಸಂಗಡ ವಾಸಿಸುವದಕ್ಕಾಗಿದೆ. ಆದರೆ ನಮ್ಮ ಜೀವಿತ ಕಾಲದಲ್ಲಿ ಅನೇಕ ಸಂಗತಿಗಳು ನಡೆಯುತ್ತದೆ. ಕೆಲವರು ನಮ್ಮನ್ನು ಪ್ರೀತಿಸುತ್ತಾರೆ, ನಂತರ ಅವರು ನಮ್ಮನ್ನು ದ್ವೇಷಿಸುತ್ತಾರೆ ಏನೇ ಸಂಭವಿಸಿದರೂ ಅವುಗಳು ನಮ್ಮ ಜೀವಿತಕ್ಕೆ ಹೆಚ್ಚು ಧೃಡತೆ ಮತ್ತು ಬಲವನ್ನು ಕೊಡುವುದಕ್ಕಾಗಿದೆ. ಯಾರೆಲ್ಲ ದೂರವಾದರೂ, ಯಾರೆಲ್ಲ ತಿರಸ್ಕರಿಸಿದರೂ, ಮಾರ್ಪಡದ ಯೇಸುಕ್ರಿಸ್ತನ ಪ್ರೀತಿ ನಿಮ್ಮನ್ನು ಸಂತೈಸಿ, ಬಲಪಡಿಸಿ ಉದ್ಧರಿಸುವಂಥದಾಗಿದೆ ಪರಲೋಕದಲ್ಲಿ ನನಗೆ ನೀನಲ್ಲದೆ ಮತ್ತಾರು ಅವಶ್ಯ? ಇಹ ಲೋಕದಲ್ಲಿ ನಿನ್ನನ್ನಲ್ಲದೆ ಇನ್ನಾರನ್ನೂ ಬಯಸುವುದಿಲ್ಲ. (ಕೀರ್ತ. 73:25). ನಿಮ್ಮ ಸೋಲು ಜೀವಿತದ ಕೊನೆಯಲ್ಲ. ದೇವರ ಚಿತ್ತವನ್ನು ನೆರವೇರಿಸಲಿರುವ ಮಾರ್ಗವಾಗಿದೆ. ನಿತ್ಯತೆಯ ಸಂಬಂಧದಲ್ಲಿ ಈ ಸೋಲು ಪ್ರಾಮುಖ್ಯವಾದ ಸಂಗತಿಯಲ್ಲ. ಕತ್ತಲೆ, ದು:ಖ, ಬಡತನ ಸೋಲುವಿಕೆಯ ರಾತ್ರಿಯ ಅನುಭವವನ್ನು ನೀಗಿಸಿ ಮೇಲು, ಸಂತೋಷ ಮತ್ತು ಸಂತೃಪ್ತಿಯನ್ನು ಅನುಭವಿಸುವ ಮುಂಜಾನೆಯನ್ನು ಕೊಡಲು ಕರ್ತನಿಗೆ ಸಾಧ್ಯ. ಕಷ್ಟ ಒಬ್ಬ ವ್ಯಕ್ತಿಯನ್ನು ಯಾವಾಗಲೂ ಹಿಂಬಾಲಿಸುವುದಿಲ್ಲ. ಯೋಬನ ಕಷ್ಟವನ್ನು ನೀಗಿಸಿದ ದೇವರು ಕತ್ತಲೆಯನ್ನು ತೆಗೆದು ಹಾಕಿದ ದೇವರು ಇಂದು ಅಲ್ಲದಿದ್ದರೆ ನಾಳೆ ನಿಮ್ಮ ಕಷ್ಟ ಮತ್ತು ಸಂಕಟವನ್ನು ನೀಗಿಸುತ್ತಾನೆ. ದೇವರು ನಿಮ್ಮನ್ನು ಆಶೀರ್ವದಿಸುತ್ತಾನೆ. ಅದು ದೇವರ ನಂಬಿಗಸ್ತಿಕೆಯಾಗಿದೆ. ಎಲ್ಲವೂ ಹಾಳದರೂ, ರೋಗಿಯಾಗಿ ಶರೀರವು ಬಲಹೀನವಾದರೂ, ಊಟಮಾಡಲು ಏನು ಇಲ್ಲದಿದ್ದರೂ,

ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ. ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ (ಕೀರ್ತ. 19:1).

ಒಂದು ಸಂಗತಿ ನನಗೆ ಗೊತ್ತಿದೆ. ನನ್ನನ್ನು ದೇವರು ಸೃಷ್ಟಿಸಿದ್ದು ಸಮಯಕ್ಕಾಗಿ ಅಲ್ಲ, ನಿತ್ಯತೆಗೋಸ್ಕರವಾಗಿದೆ, ಕೊನೆಯಿಲ್ಲದ ನಿತ್ಯತೆಯಲ್ಲಿ ನಾನು ನನ್ನ ದೇವರ ಸಂಗಡ ಜೀವಿಸುತ್ತೇನೆ ಎಂದು ಯೋಬನು ನಂಬಿದನು. ಪ್ರಿಯರೇ, ನಿಮ್ಮ ಜೀವಿತವನ್ನು ವ್ಯತ್ಯಾಸಗೊಳಿಸಿ ನಿಮ್ಮನ್ನು ಪ್ರೀತಿಸುವ ಕರ್ತನಾದ ಯೇಸುಕ್ರಿಸ್ತನು ನಿಮ್ಮೊಂದಿಗೆ ಸೇರಿ ನಡೆಯಲು ಬಯಸುತ್ತಿದ್ದಾನೆ, ನಿಮ್ಮನ್ನು ಜಯಕ್ಕೆ ನಡೆಸಲು ಬಯಸುತ್ತಿದ್ದಾನೆ. ಯೇಸುಕ್ರಿಸ್ತನಿಗೆ ನಿಮ್ಮ ಜೀವಿತ ಸಮರ್ಪಿಸಿ ಕೊಡುತ್ತೀರೋ ನನ್ನ ಕರ್ತನೆ ನಾನು ಜಯಿಸಿದರೂ, ಸೋತರೂ, ಯಾವ ಸನ್ನಿವೇಶದಲ್ಲಿ ಇದ್ದರೂ ನನ್ನ ಜೀವಿತದ ಮೌಲ್ಯಗಳನ್ನು ಹಾಳು ಮಾಡುವುದಿಲ್ಲ. ನನ್ನ ಕರ್ತನೇ ನೀವು ನನಗೆ ಆಧಾರವಾಗಿದ್ದೀರಿ. ಪ್ರಿಯರೇ, ಜೀವಿತವು ಅಮೂಲ್ಯವಾಗಿದೆ. ಜೀವಿತದಲ್ಲಿ ಕತ್ತಲೆ, ದು:ಖ, ಸಂಕಟ, ಸೋಲುವಿಕೆ ಮಾತ್ರ ತುಂಬಿಲ್ಲ. ಸೂರ್ಯನು ಉದಯಿಸುತ್ತಾನೆ. ಮುಂಜಾನೆ ಬರುತ್ತದೆ. ನೀವೆಂದಿಗೂ ದು:ಖದಲ್ಲಿ ಜೀವಿಸುವದಕ್ಕಾಗಿ ಇರುವುದಲ್ಲ. ಇಂದಿನ ಸೋಲು ನಿಮ್ಮ ನಾಳೆಯ ಉನ್ನತಿಗೆ ಕಾರಣವಾಗುತ್ತದೆ.

ಕರ್ತನು ತಾನೇ ನಿಮ್ಮೆಲ್ಲರನ್ನು ಹೇರಳವಾಗಿ ಆಶೀರ್ವದಿಸಲಿ.

---

# ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1 ತಿಮೊ. 1:19 **ನಂಬಿಕೆಯನ್ನು ಒಳ್ಳೇ ಮನಸ್ಸಾಕ್ಷಿಯನ್ನು ಬಿಡದೆ ಹಿಡಿದುಕೋ ಕೆಲವರು ಮನಸ್ಸಿನ ಒಳ್ಳೇ ಸಾಕ್ಷಿಯನ್ನು ತಳ್ಳಿಬಿಟ್ಟು ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟಪಟ್ಟವರಂತೆ ಇದ್ದಾರೆ.** “ನನ್ನ ಓಟವನ್ನು ಕಡೆಗಣೆಸಿದ್ದೇನೆ. ಕ್ರಿಸ್ತನಂಬಿಕೆಯುನ್ನು **ಕಾಪಾಡಿಕೊಂಡಿದ್ದೇನೆ”** (2 ತಿಮೊ. 4:7). **“ಸಹೋದರರೇ ನೋಡಿಕೊಳ್ಳಿರಿ ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು. ನಿಮ್ಮಲ್ಲಿ ಒಬ್ಬರಾದರೂ ಪಾಪದಿಂದ ಮೋಸಹೋಗಿ ಕಠಿಣರಾಗದಂತೆ ಈ ಹೊತ್ತು ಎಂಬ ಕಾಲವು ಇರುವ ತನಕ ಪ್ರತಿ ನಿತ್ಯವು ಒಬ್ಬರನ್ನೊಬ್ಬರು ಎಚ್ಚರಿಸಿರಿ. ಮೊದಲಿಂದಿರುವ ಭರವಸವನ್ನು ಅಂತ್ಯದವರೆಗೂ ದೃಢವಾಗಿ ಹಿಡಿದುಕೊಳ್ಳುವ ಪಕ್ಷಕ್ಕೆ ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೇವಲ್ಲಾ”** (ಇಬ್ರಿ. 3:12–14). **“ಹೀಗಿರಲಾಗಿ ದೇವರ ವಿಶ್ರಾಂತಿಯಲ್ಲಿ ಸೇರಬಹುದೆಂಬ ವಾಗ್ದಾನವೂ ಇನ್ನು ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಆ ವಾಗ್ದಾನದ ಫಲವನ್ನು ಹೊಂದದೇ ತಪ್ಪುವವನಾದನೋ ಎಂದು ನಾವು ಭಯಪಡೋಣ”** (ಇಬ್ರಿ. 4:1). **“ಈ ಅತ್ಯಂತ ವಿಶೇಷ ರಕ್ಷಣೆಯನ್ನು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳುವುದು ಹೇಗೆ”** (ಇಬ್ರಿ. 2:3). **“ಆದುದರಿಂದ ನಾವು ಆ ವಿಶ್ರಾಂತಿಯಲ್ಲಿ ಸೇರುವುದಕ್ಕೆ ಪ್ರಯಾಸಪಡೋಣ ನಮ್ಮಲ್ಲಿ ಒಬ್ಬರಾದರೂ ಅವರ ಅವಿಧೇಯತ್ವವನ್ನು ಅನುಸರಿಸುವವರಾಗಬಾರದು”** (ಇಬ್ರಿ. 4:11). **“ಒಂದು ಸಾರಿ ಜ್ಞಾನ ಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಠತೆಯನ್ನು ಮುಂದಣ ಯುಗದ ಮಹತ್ವವನ್ನು ಅನುಭವಿಸಿದವರು ಭ್ರಷ್ಟರಾದರೆ ಅವರಲ್ಲಿ ತಿರುಗಿ ಮಾನಸಾಂತರವನ್ನು ಹುಟ್ಟಿಸುವುದು ಅಸಾಧ್ಯ. ಯಾಕಂದರೆ ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನ: ಶಿಲುಬೆಗೆ ಹಾಕುವವರು ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವವರೂ ಆಗಿದ್ದಾರೆ. ಭೂಮಿಯು ತನ್ನ ಮೇಲೆ ಅನೇಕಾವರ್ತಿ ಸುರಿಯುವ ಮಳೆಯನ್ನು ಹೀರಿಕೊಂಡು ಅದು ಯಾರ ನಿಮಿತ್ತವಾಗಿ ವ್ಯವಸಾಯ ಮಾಡಲ್ಪಡುತ್ತದೋ ಅವರಿಗೆ ಅನುಕೂಲವಾದ ಬೆಳೆಯನ್ನು ಕೊಟ್ಟರೆ ದೇವರ ಆಶೀರ್ವಾದವನ್ನು ಹೊಂದುತ್ತದೆ ಆದರೆ ಅದು ಮುಳ್ಳು ಗಿಡಗಳನ್ನು ಕಳೆಗಳನ್ನು ಬೆಳೆಸಿದರೆ ಅಯೋಗ್ಯವೆನಿಸಿಕೊಂಡು ಶಾಪಕ್ಕೆ ಗುರಿಯಾಗುತ್ತದೆ. ಅದರ ಅಂತ್ಯವು ಸುಡಲ್ಪಡುವುದೇ”** (ಇಬ್ರಿ. 6:4–8). ಯಾಕಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪಮಾಡಿದರೆ ಪಾಪ ಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವುದಿಲ್ಲ. ಅತ್ಯಂತ ಭಯದಿಂದ ಎದುರು ನೋಡತಕ್ಕ ನ್ಯಾಯತೀರ್ಪು ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವವು ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಇಲ್ಲವೇ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೇ. ಯಾವನು ದೇವಕುಮಾರನನ್ನು ತಿಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿಸದಂಥ ತನ್ನನ್ನು ಪವಿತ್ರ ಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬುದನ್ನು ಯೋಚಿಸಿರಿ. ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ ನಾನೇ ಪ್ರತಿಫಲವನ್ನು ಕೊಡುವೆನೆಂದು ಹೇಳಿದಾತನನ್ನು ಬಲ್ಲೆನು. ಇದಲ್ಲದೆ ಕರ್ತನು ತನ್ನ ಜನರ ನ್ಯಾಯುವನ್ನು ವಿಚಾರಿಸುವನೆಂತಲೂ ಹೇಳಿಯದೆ. ಜೀವ ಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾಗಿದೆ” (ಇಬ್ರಿ. 10:26–31). “ಆದಕಾರಣ ನಾನು ಈ ಹೊತ್ತು ಪ್ರಮಾಣವಾಗಿ ಹೇಳುತ್ತೇನೆ. ನಿಮ್ಮಲ್ಲಿ ಯಾರಾದರೂ ನಾಶವಾದರೆ ಅದು ನನ್ನ ದೋಷವಲ್ಲ. ಯಾಕಂದರೆ ಒಂದನ್ನೂ ಮರೆಮಾಡದೆ ದೇವರ ಸಂಕಲ್ಪವನ್ನೆಲ್ಲಾ

ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು
(ಕೀರ್ತ. 139:16).

ನಿಮಗೆ ತಿಳಿಸಿದೆನು (ಅ.ಕೃ. 20:26–27). **"ಜಯಶಾಲಿಗೆ ಹೇಗೆ ಶುಭ್ರವಸ್ತ್ರಗಳನ್ನು ಹೊದಿಸುವರು ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡದೆ ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು"** (ಪ್ರಕ. 3:5). **"ಅದರಲ್ಲಿ ಹೊಲೆಯಾದದ್ದೊಂದು ಸೇರುವುದಿಲ್ಲ. ಅಸಹ್ಯವಾದದ್ದನ್ನೂ, ಸುಳ್ಳಾದದ್ದನ್ನು ನಡಿಸುವವನು ಸೇರುವುದಿಲ್ಲ ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದಿವೆಯೋ ಅವರು ಮಾತ್ರ ಸೇರುವರು"** (ಪ್ರಕ. 21:27). "ಇದಲ್ಲದೆ ಅವನು ನನಗೆ ಈ ಪುಸ್ತಕದಲ್ಲಿರುವ ಪ್ರವಾದನಾ ವಾಕ್ಯಗಳನ್ನು ಗುಪ್ತವಾಗಿಡಬೇಡ ಇವು ನೆರವೇರುವ ಸಮಯವು ಹತ್ತಿರವಾಗಿದೆ. ಅನ್ಯಾಯ ಮಾಡುವವನು ಇನ್ನು ಅನ್ಯಾಯಮಾಡಲಿ ಮೈಲಿಗೆಯಾದವನು ಇನ್ನು ಮೈಲಿಗೆ ಮಾಡಿಕೊಳ್ಳಲಿ. ನೀತಿವಂತನು ಇನ್ನು ನೀತಿಯನ್ನು ಅನುಸರಿಸಲಿ ಪವಿತ್ರನು ತನ್ನನ್ನು ಇನ್ನು ಪವಿತ್ರಮಾಡಿಕೊಳ್ಳಲಿ. ಇಗೋ ಬೇಗ ಬರುತ್ತೇನೆ. ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿದೆ. ನಾನೇ ಆದಿಯು ಅಂತ್ಯವೂ ಮೊದಲನೆಯವನೂ ಕಡೆಯವನೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ. ತಮ್ಮ ನಿಲುವಂಗಿಗಳನ್ನು ತೊಳಕೊಂಡವರು ಧನ್ಯರು. ಅವರಿಗೆ ಜೀವವೃಕ್ಷದ ಹಕ್ಕು ಇರುವುದು. ಅವರು ಬಾಗಿಲುಗಳಿಂದ ಆ ಪಟ್ಟಣದೊಳಕ್ಕೆ ಸೇರುವರು. ನಾಯಿಗಳಂತಿರುವವರೂ ಮಾಟಗಾರರು ಜಾರರೂ ಕೊಲೆಗಾರರು ವಿಗ್ರಹಾರಾಧಕರೂ ಸುಳ್ಳಾದದ್ದನ್ನು ಪ್ರೀತಿಸಿ ನಡಿಸುವವರೆಲ್ಲರೂ ಹೊರಗಿರುವರು ಎಂದು ಹೇಳಿದನು (ಪ್ರಕ. 22:10–15).

**ಹಿಂಜಾರುವಿಕೆಯ ಅರ್ಥಗಳು :** 1) ಯೆರೆ. 3:13–14 ನೀನು ಕಂಡ ಕಡೆಯೆಲ್ಲಾ ತಿರುಗುತ್ತಾ ಸೊಂಪಾಗಿ ಬೆಳೆದಿರುವ ಪ್ರತಿಯೊಂದು ಮರದ ಕೆಳಗೆ ಅನ್ಯರನ್ನು ಸೇರಿ ನನ್ನ ಮಾತನ್ನು ಕೇಳದೆ ನಿನ್ನ ದೇವರಾದ ಯೆಹೋವನೆಂಬ ನನಗೆ ದ್ರೋಹ ಮಾಡಿದ್ದೀ ಎಂಬುದಕ್ಕೆ ಒಪ್ಪಿಕೋ ಇದೇ ಯೆಹೋವನ ನುಡಿ ಭ್ರಷ್ಟರಾದ ಮಕ್ಕಳೇ ತಿರುಗಿಕೊಳ್ಳಿರಿ ನಾನು ನಿಮಗೆ ಪತಿ. ಒಂದು ಪಟ್ಟಣಕ್ಕೆ ಒಬ್ಬನಂತೆಯೂ ಗೋತ್ರಕ್ಕೆ ಇಬ್ಬರಂತೆಯೂ ಆರಿಸಿ ಚೀಯೋನಿಗೆ ಕರೆತರುವೆನು. (ದ್ರೋಹ).

ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ ಜನಾಂಗ ಹಾಗೂ ತಂದೆಯಾದ ದೇವರ ಸಂಬಂಧವನ್ನು ಪತಿ ಪತ್ನಿಯ ಸಂಬಂಧಕ್ಕೆ ಹೋಲಿಸಲಾಗಿತ್ತು. ಯೆಶಾ. 54:5 **ನಿನ್ನ ಸೃಷ್ಟಿಕರ್ತನೆ ನಿನ್ನ ಪತಿ ಆತನ ಹೆಸರು ಸೇನಾಧೀಶ್ವರನಾದ ಯೆಹೋವ ಇಸ್ರಾಯೇಲಿನ ಸದಮಲಸ್ವಾಮಿಯು ನಿನ್ನ ನ್ಯಾಯ ಸ್ಥಾಪಕನಾಗಿದ್ದಾನೆ. ಸರ್ವ ಲೋಕದ ದೇವರೆಂಬ ನಾಮಧೇಯವನ್ನು ಹೊಂದಿರುವನು. "ನಾನು ನಿನ್ನನ್ನು ಶಾಶ್ವತವಾಗಿ ವರಿಸುವೆನು ಹೌದು ನೀತಿನ್ಯಾಯ ಪ್ರೀತಿ ದಯೆಗಳಿಂದ ನಿನ್ನನ್ನು ವರಿಸುವೆನು ನಾನು ನಿನ್ನನ್ನು ನಂಬಿಕೆಯಿಂದ ವರಿಸಲು ನೀನು ಯೆಹೋವನಾದ ನನ್ನನ್ನು ತಿಳಿದುಕೊಳ್ಳುವಿ"** (ಹೋಶೆ. 2:19–20). ಯುವಕನು ಯುವತಿಯನ್ನು ವರಿಸುವಂತೆ ನಿನ್ನ ಮಕ್ಕಳು ನಿನ್ನನ್ನು ವರಿಸುವರು. ವರನು ವಧುವಿನಲ್ಲಿ ಆನಂದಿಸುವ ಹಾಗೆ ನಿನ್ನ ದೇವರು ನಿನ್ನಲ್ಲಿ ಆನಂದಿಸುವನು (ಯೆಶಾ. 62:5). ಒಂದೇ ಮಾತಿನಲ್ಲಿ ಹೇಳಬೇಕಾದರೆ ತಂದೆಯಾದ ದೇವರ ಹಾಗೂ ಇಸ್ರಾಯೇಲ್ ಜನಾಂಗದ ಸಂಬಂಧ ಪತಿ ಪತ್ನಿಯ ಸಂಬಂಧ. ಇದು ಆತ್ಮೀಕವಾದ ದಾಂಪತ್ಯ ಜೀವಿತವಾಗಿದೆ. ಇದು ಪರಿಶುದ್ಧವಾದ ದಾಂಪಾತ್ಯ ಜೀವಿತವಾಗಿದೆ. ಯಾವಾಗ ಇಸ್ರಾಯೇಲ್ ಜನಾಂಗ ತಮ್ಮನ್ನು ಐಗುಪ್ತದಿಂದಲೂ ಸಕಲ ಕಷ್ಟ ದು:ಖಗಳಿಂದಲೂ ಬಿಡುಗಡೆ ಮಾಡಿ ರಕ್ಷಿಸಿ ನಡೆಸುತ್ತಿದ್ದಂತಹ ದೇವರನ್ನು ಮರೆತು ಕಲ್ಲಿನಿಂದ, ಮರದಿಂದ, ಮಣ್ಣಿನಿಂದ ಮಾಡಿದಂತಹ ದೇವರುಗಳನ್ನು ಹಾಗೂ ದೇವರು ಸೃಷ್ಟಿಸಿದ ಸೃಷ್ಟಿಯನ್ನು ನಂಬಿ ಆರಾಧಿಸಲು ಆರಂಭಿಸಿತೋ ಆಗ ಇಸ್ರಾಯೇಲರು ದೇವ ದ್ರೋಹಿಗಳಾಗಿ ಮಾರ್ಪಟ್ಟರು.

1. ದೇವರು ರಕ್ಷಕನಾಗಿದ್ದನು.
2. ದೇವರು ಅವರನ್ನು ನಡೆಸುವಾತನಾಗಿದ್ದನು.
3. ದೇವರು ಅವರ ಮಾರ್ಗದರ್ಶಕನಾಗಿದ್ದನು.
4. ದೇವರ ಅವರ ಅವಶ್ಯಕತೆಗಳನ್ನು ಪೂರೈಸುತ್ತಿದ್ದನು.
5. ದೇವರು ಅವರನ್ನು ಅಪಾಯಗಳಿಂದ ರಕ್ಷಿಸುತ್ತಿದ್ದನು.
6. ದೇವರು ಅವರಿಗೆ ವೈರಿಗಳ ಮೇಲೆ ಜಯ ಕೊಟ್ಟನು.
7. ದೇವರು ಅವರ ಕಣ್ಣೀರನ್ನು ಒರೆಸಿದನು.
8. ದೇವರು ಅವರಿಗೆ ದಾಸತ್ವದಿಂದ ಬಿಡುಗಡೆಕೊಟ್ಟನು.
9. ದೇವರು ಅವರನ್ನು ಲೋಕದಿಂದ ಪರಿಶುದ್ಧ ಜನಾಂಗವಾಗಿ ಆರಿಸಿದನು.
10. ದೇವರು ಅವರನ್ನು ಪ್ರೀತಿಸಿದನು.
11. ದೇವರು ಅವರೊಂದಿಗೆ ಮೇಘಸ್ತಂಭವಾಗಿ ಅಗ್ನಿಸ್ತಂಭವಾಗಿ ನಡೆದನು.
12. ದೇವರು ಅವರ ಪ್ರಾರ್ಥನೆಗಳಿಗೆ ಉತ್ತರ ಕೊಟ್ಟನು. ಇಷ್ಟೆಲ್ಲಾ ಅದ್ಭುತಗಳನ್ನು ದೇವರು ಅವರ ಮಧ್ಯದಲ್ಲಿ ಮಾಡಿ ಅವರ ಮೇಲಿರುವ ತನ್ನ ಪ್ರೀತಿಯನ್ನು ಪ್ರಕಟಸಿದರೂ ಅವರು ತಮ್ಮನ್ನು ಸೃಷ್ಟಿಸಿದ ದೇವರನ್ನು ಮರೆತು ದೇವರು ಸೃಷ್ಟಿಸಿದ ಸೃಷ್ಟಿಯನ್ನು ಆರಾಧಿಸಿದರು. ಇಸ್ರಾಯೇಲರು ಮಾಡಿದ ದೇವ ದ್ರೋಹ ಯಾವುದು?

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನನ್ನ ಆಯುಷ್ಕಾಲದ ಪ್ರಥಮ ದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು (ಕೀರ್ತ. 139:16).

## ಆರೋಗ್ಯ ಸ್ವರ

ಮಳೆ ಚಳಿಗಾಲದಲ್ಲಿ ಆಹಾರ ಪದಾರ್ಥಗಳನ್ನು ಕಾಪಾಡೋದೇ ದೊಡ್ಡ ಸರ್ಕಸ್. ಇಂಥ ತಂಪು ವಾತಾವರಣದಲ್ಲಿ ತರಕಾರಿ, ಹಣ್ಣುಗಳು ಮತ್ತು ಮಾಂಸದ ಮೇಲೆ ಸೂಕ್ಷ್ಮಾಣು ಜೀವಿಗಳು ಅಂಟಿಕೊಂಡು ಹಾಳುಗೆಡವುತ್ತವೆ. ಪದಾರ್ಥಗಳಲ್ಲಿನ ಜೀವಸತ್ವ ಕಣಗಳನ್ನು ಬ್ಯಾಕ್ಟೀರಿಯಾಗಳು ಹಾಳುಮಾಡಿ, ದುರ್ವಾಸನೆಯನ್ನೂ ಹೊರಡಿಸುತ್ತವೆ. ಇದನ್ನು ಸೇವಿಸಿದರೆ ಆರೋಗ್ಯ ಕ್ಷೀಣಿಸುವುದು ನಿಶ್ಚಿತ. ಆದರೆ, ಶಿಲೀಂಧ್ರ (ಫಂಗಸ್) ಆಹಾರ ಪದಾರ್ಥಗಳನ್ನು ವಿಕಾರಕ್ಕೆ ತಂದರೂ ಅಷ್ಟೊಂದು ಅಪಾಯಕಾರಿಯಲ್ಲ.

**ಹಾಳಾಗುವ ಲಕ್ಷಣಗಳು:** ಹಣ್ಣು, ತರಕಾರಿ, ಒಣಗಿದ ಆಹಾರ ಪದಾರ್ಥದ ಮೇಲೆ ನಾರಿನಂತೆ ಎಳೆಎಳೆಯಾಗಿ ಹೊಟ್ಟು ಕಾಣಿಸಿಕೊಳ್ಳುವುದು. ಕಂದುಬಣ್ಣಕ್ಕೆ ತಿರುಗುವುದು. ಇದನ್ನು ಶಿಲೀಂಧ್ರ ಜಾಲದ ತಂತು' ಎಂದೂ ಕರೆಯಲಾಗುತ್ತದೆ. ಜೀವಸತ್ವ ಕಣಗಳು ದ್ರವರೂಪಕ್ಕೆ ತಿರುಗಿ ಸೋರತೊಡಗುತ್ತವೆ. ಗೂಡು ಕಟ್ಟುತ್ತವೆ. ಪದಾರ್ಥ ಮೃದುವಾಗುತ್ತ ಸಾಗುತ್ತದೆ. ನಂತರ ಪಾಚಿಗಟ್ಟಿ ಹಾಳಾಗುತ್ತದೆ. ಶಿಲೀಂಧ್ರಗಳು ವ್ಯಾಪಿಸಿದ ಸ್ಥಳದಲ್ಲಿ ಮೊದಲು ಪಾಚಿ, ಹೊಟ್ಟಿನಂತೆ ಕಾಣಿಸಿಕೊಂಡು ನಂತರ ವಸ್ತುವಿನ ಒಳಭಾಗಕ್ಕೆ ಶಿಲೀಂದ್ರ ಜಾಲದ ತಂತುಗಳು ವ್ಯಾಪಿಸುತ್ತವೆ. ಆದರೆ ಬ್ಯಾಕ್ಟೀರಿಯಾ, ಸೂಕ್ಷ್ಮಾಣು ಜೀವಿಗಳು ಪದಾರ್ಥದ ಒಳಭಾಗದಲ್ಲಿ ಮೊದಲು ವ್ಯಾಪಿಸಿ ಅದನ್ನು ವಿವರ್ಣಗೊಳಿಸಿ, ಅಂಟಾಗಿಸಿ, ದುರ್ವಾಸನೆ ಬರುವಂತೆ ಮಾಡುತ್ತವೆ.

**ಕೊಳೆಯದಿರಲು ಕಾರಣ:** ಕೆಲ ಹಣ್ಣು ಮತ್ತು ತರಕಾರಿ ಕೊಳೆಯುವುದು ತುಂಬಾ ಅಪರೂಪ. ಏಕೆಂದರೆ ಇವುಗಳಲ್ಲಿ ಬ್ಯಾಕ್ಟೀರಿಯಾ, ಸೂಕ್ಷ್ಮಾಣು ಜೀವಿಗಳನ್ನು ಪ್ರತಿರೋಧಿಸುವ ಶಕ್ತಿ ಇರುತ್ತದೆ. ಬ್ಯಾಕ್ಟೀರಿಯಾಗಳು ಸಾಮಾನ್ಯವಾಗಿ ಬಾಧಿಸುವುದು ತೇವವಿರುವ ಹಾಗೂ ಒದ್ದೆಯಾಗಿರುವ ಪದಾರ್ಥಗಳಲ್ಲಿ. ಅದಕ್ಕೇ ಒಣಗಿದ ಆಹಾರ ಪದಾರ್ಥ, ಪರಾಸರಣ (ಆಸ್ಮೋಸಿಸ್), ಸಿಹಿ ಮತ್ತು ಲವಣಾಂಶ ಅಧಿಕವಾಗಿರುವಲ್ಲಿ ತಮ್ಮ ಕೈಚಳಕ ತೋರಲು ಆಗದು. ಅದಕ್ಕಾಗಿ ಬಾಳೆಹಣ್ಣು ಮತ್ತು ಸೇಬು ಇವುಗಳಿಂದ ಮುಕ್ತವಾಗಿರುತ್ತವೆ. ಗಮನಾರ್ಹ ಅಂಶವೆಂದರೆ, 5 ಸಾವಿರ ವರ್ಷಗಳ ಹಿಂದೆ ಈಜಿಪ್ಟರ ಕಾಲದಲ್ಲಿನ ಜೇನುತುಪ್ಪ ವೈಜ್ಞಾನಿಕವಾಗಿ ಈಗಲೂ ತಿನ್ನಲು ಯೋಗ್ಯವಾಗಿದೆ. ಇದಕ್ಕೆ ಕಾರಣ ಅದರಲ್ಲಿ ಸಿಹಿ ಪ್ರಮಾಣ ಅಧಿಕವಿರುವುದು.

ಮಾಂಸದ ಮತ್ತು ಕ್ರಿಮಿ ಮಾಂಸಕ್ಕೂ ಮತ್ತು ಕ್ರಿಮಿಗಳಿಗೂ ಅವಿನಾಭಾವ ಸಂಬಂಧ. ಏಕೆಂದರೆ ನೀರು, ದ್ರಾವಣ ಮತ್ತು ಕೊಬ್ಬಿನಂಶ ಅಧಿಕವಿರುವ ಮಾಂಸದಲ್ಲಿ ಸೂಕ್ಷ್ಮಾಣು ಜೀವಿಗಳು ಬೇಗನೆ ಉತ್ಪತ್ತಿಯಾಗುತ್ತವೆ. ಹೆಣ್ಣು ಕ್ರಿಮಿಗಳು ನಿಮಿಷಕ್ಕೆ ಸುಮಾರು 150ರಿಂದ 200ರಷ್ಟು ಲಾರ್ವಾ(ಮೊಟ್ಟೆ)ಗಳನ್ನು ಹಾಕುತ್ತವೆ. ಈ ಲಾರ್ವಾಗಳು 24 ಗಂಟೆಗಳಲ್ಲೇ ಕ್ರಿಮಿಗಳಾಗಿ ಹೊರಬರುತ್ತವೆ. ಇವುಗಳು ಮಾಂಸದಲ್ಲಿರುವ ಕಿಣ್ವಗಳನ್ನು ಶೀಘ್ರದಲ್ಲೇ ಅವಸಾನಗೊಳಿಸುತ್ತವೆ.

ರಕ್ಷಣಾ ಕಾರ್ಯ ಹೇಗೆ ? ಆಹಾರ ಪದಾರ್ಥದ ಕೊಳೆಯುವಿಕೆ, ವಿಷಯುಕ್ತವಾಗುವುದನ್ನು ತಪ್ಪಿಸಲು ಮುಖ್ಯವಾಗಿ 3 ಅಂಶಗಳನ್ನು ಗಮನದಲ್ಲಿಡಬೇಕು. ಸೂಕ್ಷ್ಮಾಣು ಜೀವಿಗಳ ತಡೆ (ಆಂಟಿ ಮೈಕ್ರೋಬ್ಸ್), ಗಾಳಿ (ಆಕ್ಸಿಜನ್) ಮತ್ತು ಕಿಣ್ವಗಳು (ಎಂಜಿಮ್ಸ್). ಮೈಕ್ರೋಬ್ಸ್ ಯಾವ ಆಹಾರದಲ್ಲಿ ಸೂಕ್ಷ್ಮಾಣು ಜೀವಿ ಹಾಗೂ ಫಂಗಸ್ ಪ್ರತಿರೋಧಕ ಅಂಶವಿರುವುದಿಲ್ಲವೋ ಅದರಲ್ಲಿ ಲವಣಾಂಶ ಮತ್ತು ಸಿಹಿಯನ್ನು ಬೇರ್ಪಡಿಸಬೇಕು. ಇದರಿಂದ ಬ್ಯಾಕ್ಟೀರಿಯಾಗಳು ಹುಟ್ಟಿಕೊಳ್ಳುವುದಿಲ್ಲ. ಅಲ್ಲದೆ ಆಸ್ಮಾಸಿಸ್ಸೂ ಇವುಗಳನ್ನು ಪ್ರತಿರೋಧಿಸುತ್ತದೆ. ಆಹಾರಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸುತ್ತದೆ.

– ಸಂಗ್ರಹ.

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯು ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ನಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಷಿಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

– ಸಂಪಾದಕರು, ದೇವರ ಸ್ವರ.

ಯೆಹೋವನು ದೊಡ್ಡವನು ಬಹಳವಾಗಿ ಸ್ತುತ್ಯನೂ ಆಗಿದ್ದಾನೆ. ಎಲ್ಲಾ ದೇವರುಗಳಲ್ಲಿ ಆತನೇ ಭಯಂಕರನು (ಕೀರ್ತ. 96:4).

# ಜಾಹಿರಾತು

ನಿಮಗೆ ಶಾಲೆಯ ಯೂನಿಫಾರಂ ಮತ್ತು ದೇವರ ವಾಕ್ಯದ ಟಿ-ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 9844265602.**

## ಬೇಕಾಗಿದ್ದಾರೆ

ಒಂದು ಒಳ್ಳೆಯ ಕ್ರೈಸ್ತ ಸೇವಾ ಸಂಸ್ಥೆಗೆ Accountant ಬೇಕಾಗಿದ್ದಾರೆ

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0820–2002781, 9902334941.**

## ಬೇಕಾಗಿದ್ದಾರೆ

24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ ಪ್ರಾರ್ಥನಾ ವೀರರು ಬೇಕಾಗಿದ್ದಾರೆ. ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು. ಪ್ರಾರ್ಥನೆ ಮಾಡಲು ಇಚ್ಛಿಸುವವರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941.**

ನೀವು ನಮ್ಮ ಅನಾಥಾಶ್ರಮದಲ್ಲಿ ಸೇವೆ ಮಾಡಲು ಇಷ್ಟಪಡುವುದಾದರೆ

ನಮ್ಮನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781.**

ಯೆಹೋವನೇ, ನನ್ನ ದೇವರೇ ನೀನು ಸರ್ವೋತ್ಕೃಷ್ಟನು, ಪ್ರಭಾವಮಹತ್ವಗಳಿಂದ ಭೂಷಿತನಾಗಿದ್ದೀ (ಕೀರ್ತ. 104:1).

## ಈ ವಾಕ್ಯಗಳು ಎಲ್ಲಿವೆ?

ಮಕ್ಕಳ ಸ್ವರ

1) ಕಪೆರ್ನೌಮಿನಲ್ಲಿ ಪೇತ್ರನನ್ನು ಅಧಿಕಾರಿಗಳು ಎಂತಹ ತೆರಿಗೆ ಅಥವಾ ಕಂದಾಯ ಸಲ್ಲಿಸಲು ಕೇಳಿದರು?
2) ಶದ್ರಕ್‌ನ ಮೊದಲ ಹೆಸರೇನು ?
3) ಎಸ್ತೇರಳನ್ನು ಸಾಕುತ್ತಿದ್ದ ಆಕೆಯ ದೊಡ್ಡಪ್ಪನ ಮಗನು ಯಾರು ?
4) ಇಸಾಕನನ್ನು ಮದುವೆಯಾದ ರೆಬೆಕ್ಕಳು ಯಾರ ಮಗಳು ?
5) ಆರೋನನ ಮಗನ ಹೆಸರೇನು ?
6) ಬೇರ್ಷೆಬದಿಂದ ಖಾರಾನಿಗೆ ಹೋಗುವ ದಾರಿಯಲ್ಲಿ ತಾನು ದರ್ಶನಕಂಡಂತ ಸ್ಥಳಕ್ಕೆ ಯಾಕೋಬನು ಏನೆಂದು ಹೆಸರಿಟ್ಟನು ?
7) ಕೊಲೆ ಮಾಡಬಾರದು ಇದು ಎಷ್ಟನೇ ಆಜ್ಞೆ ? ಅಥವಾ ನರಹತ್ಯ ಮಾಡಬಾರದು ಇದು ಎಷ್ಟನೇ ಆಜ್ಞೆ ?
8) ಅರಸನಾದ ಸೊಲೋಮೋನನ ತಾಯಿ ಯಾರು ?
9) ಯಾಜಕನಾದ ಆರೋನನ ನಾಮಕರಣದ ಹೆಸರೇನು?
10) ಲಾಜರನ ಅಕ್ಕಳಾದ ಮರಿಯಳು ಯೇಸುವಿನ ತಲೆಯ ಮೇಲೆ ಎಂಥಹ ತೈಲವನ್ನು ಹೊಯ್ದಳು ?

---

### ಆಗಸ್ಟ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1. ಎಲ್ಲಾಜಾರನಮಗನು – ಅರಣ್ಯ. 25:7
2. ದಾವೀದನು – 1 ಸಮು. 17:51
3. ಪೌಲ
4. ನ್ಯಾಯಸ್ಥಾಪಕರು 13ನೇ ಅಧ್ಯಾಯದಲ್ಲಿ
5. ನಾಲ್ಕನೇ ದಿನದಲ್ಲಿ – ಆದಿ. 1:14–18
6. ಅರಿಮಥಾಯದ ಯೆಹೂದ್ಯರ ಪಟ್ಟಣದ ಹಿರೀ ಸಭೆಯವನು, ಉತ್ತಮನು, ಸತ್ಪುರಷನೂ ಆದ ಯೋಸೇಫನು (ಲೂಕ. 23:50–51).
7. ಪೊಪ್ಲಿಯವನೆಂಬವನ ತಂದೆ – (ಅ.ಕೃ. 28:7–8).
8. ಬೇತ್ಲೆಹೇಮಿನ ಇಷಯನ ಮಗನು – (1 ಸಮು. 17–58).
9. ಅಬೀನಾದಾಬನು – (1 ಸಮು. 7:1).
10. ದೆಲೀಲಾ – (ನ್ಯಾಯ. 16:4–19).

---

## ಡಿಜಿಎಮ್ ಬೇತೇಲ್ ಅಂಕಣ

- **ಪಾ॥ ಸುನಿಲ್ ಜಾನ್ ಡಿ'ಸೋಜಾರವರು ದುಬೈ, ಕುವೈಟ್ ಮತ್ತು ಬಹರೈನ್ ದೇಶಗಳಿಗೆ ಹೋಗಿ ಕರ್ತನ ಸೇವೆಯನ್ನು ಮಾಡಿ ಬಂದಿದ್ದಾರೆ.**

ನಾನು ನಿನ್ನ ಸಂಗಡ ಇದ್ದು ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿ ನಿನ್ನನ್ನು ಕಾಪಾಡಿ ತಿರುಗಿ ಈ ದೇಶಕ್ಕೆ ಬರಮಾಡುತ್ತೇನೆ (ಆದಿ. 28:15).